ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 71

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಶನಿವಾರ: 21-02-2026

**SEHRI & IFTARI TIME**

DAY : SATURDAY
RAMZAN : 03
DATE: 21.02.2026
END TIME OF SEHRI :5:27 AM
FAJAR AZAAN : 5:32 AM

IFTAR TIME : 6:28 PM



ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ
ಕಾರ್ಯದರ್ಶಿಗಳು : ಮತ್ ವಾಲೆ
ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ
ಸಂಪಾದಕರು : ಧೈರ್ಯದ ದಾರಿ ಕನ್ನಡ ದಿನಪತ್ರಿಕೆ

ಸುದ್ದಿ ಮತ್ತು ಜಾಹೀರಾತಿಗಾಗಿ
6360866626

## "ಕಮಿಷನ್ ಚೋರ್ ಸರ್ಕಾರ, ಕಾಮ್ ಚೋರ್ ಮಂತ್ರಿಗಳು" ಸಿದ್ದರಾಮಯ್ಯ ಸರ್ಕಾರದ ವಿರುದ್ದ ಅಶೋಕ್ ಆರೋಪ

**ಬೆಂಗಳೂರು,ಫೆ.20–** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನಿಮ್ಮದು ಕಮಿಷನ್ ಚೋರ್ ಸರ್ಕಾರ, ಕಾಮ್ ಚೋರ್ ಮಂತ್ರಿಗಳು ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಸಿ.ಎಂ ಸಿದ್ದರಾಮಯ್ಯ ಅವರೇ, ಕರ್ನಾಟಕದಲ್ಲಿರುವ ನಿಮ ಕಮಿಷನ್ ಚೋರ್ ಕಾಂಗ್ರೆಸ್ ಸರ್ಕಾರದಲ್ಲಿ ಕಾಮ್ ಚೋರ್ ಮಂತ್ರಿಗಳೇ ತುಂಬಿ ತುಳುಕುತ್ತಿದ್ದಾರೆ. ಒಂದು ಕಡೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಣಕಾಸು ಇಲಾಖೆಯಿಂದ 880 ಕೋಟಿ ಅನುದಾನ ಬಿಡುಗಡೆ ಆಗಿದ್ದರೂ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿ ಖರೀದಿ ಮಾಡದೆ, ಸ್ಕ್ಯಾನಿಂಗ್ ಸೇವೆ ಒದಗಿಸುವ ಕಂಪನಿಗಳಿಗೆ 143 ಕೋಟಿ ಬಾಕಿ ಬಿಲ್ ಪಾವತಿ ಮಾಡದೆ, ಸಾರ್ವಜನಿಕರು ಪರದಾಡುವಂತೆ ಮಾಡಿದ್ದಾರೆ.

ಇನ್ನೊಂದು ಕಡೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು



ಇಎಸ್‌ಐ ಆಸ್ಪತ್ರೆಗಳಿಗೆ ಔಷಧಿ ಪೂರೈಕೆ ಮಾಡಿದ ಕಂಪನಿಗಳಿಗೆ 60 ಕೋಟಿ ಬಿಲ್ ಪಾವತಿ ಬಾಕಿ ಉಳಿಸಿಕೊಂಡು, ರೇಟ್‌ಕಾರ್ಡ್ ಆಧಾರದಲ್ಲಿ ಔಷಧಿ, ಉಪಕರಣ ಖರೀಸುವ ಮೂಲಕ ಕಾರ್ಮಿಕರ ಹಣ ಲೂಟಿ ಹೊಡೆಯಲು ಹೊರಟಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಸಿಎಂ ಸಿದ್ದರಾಮಯ್ಯ ನವರೇ, ಎಲ್ಲ ಇಲಾಖೆಗಳಲ್ಲೂ ಹಿಂದಿನ ವರ್ಷಗಳಲ್ಲೆ ಸಾವಿರಾರು ಕೋಟಿ ಬಿಲ್ ಪಾವತಿ ಬಾಕಿ ಇರುವಾಗ ಈಗ ಇನ್ನೊಂದು ಬಜೆಟ್ ಮಂಡನೆ ಮಾಡಿ ಏನು ಸಾಧಿಸಲು ಹೊರಟಿದ್ದೀರಿ ಸ್ವಾಮಿ? ಇನ್ನೆಷ್ಟು ದಿನ ಸ್ವಾಮಿ ಈ ಭಂಡ ಬಾಳು ರಾಜೀನಾಮೆ ಕೊಟ್ಟು ಕರ್ನಾಟಕವನ್ನು ಉಳಿಸಿ ಎಂದು ಕಿಡಿಕಾರಿದ್ದಾರೆ.

ಮತ್ತೊಂದು ಪೋಸ್ಟ್‌ನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಅವರ ವಿರುದ್ಧವೂ ಕಿಡಿಕಾರಿರುವ ಅಶೋಕ್, ತಮ ತವರು ಜಿಲ್ಲೆಯಲ್ಲಿ ಕುಡಿಯುವ ನೀರು ಕೊಡಲೂ ಯೋಗ್ಯತೆ ಇಲ್ಲದವರು ಕರಾವಳಿಯಲ್ಲಿ ಐಟಿ ಕಂಪನಿಗಳ ಹೂಡಿಕೆ ಬಗ್ಗೆ ಮಾತಾಡುವುದು ಈ ಶತಮಾನದ ಅತ್ಯಂತ ದೊಡ್ಡ ವಿಪರ್ಯಾಸ.ಕಲ್ಯಾಣ ಕರ್ನಾಟಕದ ಅಧಿಕಾರದಾಹಿ ದೆವ್ವಗಳು ಅಲ್ಲಿಂದ ತೊಲಗುವವರೆಗೂ ಕಲ್ಯಾಣ ಕರ್ನಾಟಕದ ಈ ದುಸ್ಥಿತಿಗೆ ಮುಕ್ತಿ ಇಲ್ಲ ಎಂದು ಅವರು ಟೀಕಾ ಪ್ರಹಾರ ನಡೆಸಿದ್ದಾರೆ.

## ಸುಚಿತಾ ಮಿಲೇನಿಯಂ ಕ್ರಷರ್ ಅಕ್ರಮ ಗಣಿಗಾರಿಕೆ ವಿರುದ್ಧ ಪ್ರತಿಭಟನೆ ಭ್ರಷ್ಟ ಅಧಿಕಾರಿಗಳ ಅಮಾನತು ಮತ್ತು ಕ್ರಿಮಿನಲ್ ಪ್ರಕರಣಕ್ಕೆ ಆಗ್ರಹ




ಧೈರ್ಯದ ದಾರಿ

**ಮಾನ್ವಿ,ಫೆ.20–** ತಾಲೂಕು ನೀರಮಾನ್ವಿ ಗ್ರಾಮದ ಸರ್ವೆ ನಂ. 55/1 ಮತ್ತು 56ರಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಚಿತಾ ಮಿಲೇನಿಯಂ ಪ್ರಾಜೆಕ್ಟ್ ಪ್ರೈ. ಲಿಮಿಟೆಡ್ ಸಂಸ್ಥೆಯ ಅಕ್ರಮ ಗಣಿಗಾರಿಕೆ ಹಾಗೂ ಅದಕ್ಕೆ ಸಾಥ್ ನೀಡುತ್ತಿರುವ ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ಮಾನ್ವಿ ತಾಲೂಕು ಪಂಚಾಯತ್ ಆವರಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಸೇವಕ ಗುರುರಾಜ ನಾಗಲಾಪುರ ಮಾತನಾಡಿದರು. ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟ ಉಂಟುಮಾಡುವ ರೀತಿಯಲ್ಲಿ ದಂಡದ ಮೊತ್ತದಲ್ಲಿ ಅಕ್ರಮವಾಗಿ ಕಡಿತ ಮಾಡಲಾಗಿದೆ ಎಂದು ಅವರು ಗಂಭೀರ ಆರೋಪ ಮಾಡಿದರು.

ಅಂದಿನ ಸಹಾಯಕ ಆಯುಕ್ತರ ವರದಿಯಂತೆ ವಿಧಿಸಲಾಗಿದ್ದ 188 ಲಕ್ಷ ರೂ. ದಂಡವನ್ನು ಪ್ರಸ್ತುತ ಹಿರಿಯ ಭೂ ವಿಜ್ಞಾನಿ ಮುತ್ತಪ್ಪ, ಮಹೇಶ್ ಹಾಗೂ ಇಂಜಿನಿಯರ್ ನಂದಿನಿ ಅವರು ಅಕ್ರಮವಾಗಿ 82 ಲಕ್ಷ ರೂ.ಗೆ ಇಳಿಸಿರುವುದರಿಂದ ಸರ್ಕಾರಕ್ಕೆ ಭಾರೀ ನಷ್ಟ ಉಂಟಾಗಿದೆ ಎಂದು ಅವರು ಹೇಳಿದರು. ಕಂಪನಿಯು ನಿಗದಿತ ಜಾಗಕ್ಕಿಂತ ಸುಮಾರು 3 ಎಕರೆ ಹೆಚ್ಚುವರಿ ಕಂದಾಯ ಹಾಗೂ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಅಕ್ರಮ ಗಣಿಗಾರಿಕೆ ನಡೆಸಿರುವುದು ಪಂಚನಾಮೆಯಿಂದ ಸಾಬೀತಾಗಿದ್ದು, ಈ ಹೆಚ್ಚುವರಿ ಗಣಿಗಾರಿಕೆಗೆ ಪುನಃ ದಂಡ ವಿಧಿಸಬೇಕು ಎಂದು ಆಗ್ರಹಿಸಿದರು. ಎನ್.ಒ.ಸಿ ಪಡೆಯದೇ 5 ಎಕರೆ ಲೀಸ್ ಪಡೆದು ಪರಿಸರ ನಿಯಮಗಳನ್ನು ಉಲ್ಲಂಘಿಸಿ ದೊಡ್ಡ ಜನರೇಟರ್‌ಗಳ ಮೂಲಕ ಅಕ್ರಮ ಜಲ್ಲಿ ಉತ್ಪಾದನೆ ನಡೆಸಲಾಗುತ್ತಿದೆ ಎಂಬ ಆರೋಪವನ್ನೂ ಅವರು ವ್ಯಕ್ತಪಡಿಸಿದರು.

ಕ್ರಷರ್ ಚಟುವಟಿಕೆಯಿಂದ ಬೆಟ್ಟದೂರು ಗ್ರಾಮದ ಮನೆಗಳಿಗೆ ಹಾನಿಯಾಗಿದ್ದು, ಸಂತ್ರಸ್ತರಿಗೆ ತಕ್ಷಣ ಪರಿಹಾರ ನೀಡಬೇಕು. ಅಕ್ರಮ ಎಸಗಿದ ಕಂಪನಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳಾದ ಮುತ್ತಪ್ಪ, ಮಹೇಶ್, ನಂದಿನಿ ಹಾಗೂ ಶೈಲಜಾ ಅವರನ್ನು ಕೂಡಲೇ ಅಮಾನತುಗೊಳಿಸಬೇಕು. ಸರ್ಕಾರಕ್ಕೆ ವಂಚಿಸಿದ ದಂಡದ ಸಂಪೂರ್ಣ ಮೊತ್ತವನ್ನು ವಸೂಲಿ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಮುಖಂಡರುಗಳಾದ ಸಂಗನಬಸವ, ಕಿರಣ್ ಉದ್ಬಾಳ್, ಹೊಳೆಯಪ್ಪ, ಶಿವಕುಮಾರ್ ಕೆ., ಹುಸೇನಪ್ಪ ನಂದಿಹಾಳ್, ಶಿವಪುತ್ರ ಕುಪ್ಪೇಗುಡ್ಡ, ಈರಣ್ಣ ನಾಯಕ ಬುರಂಪುರ ಮುಂತಾದವರು ಭಾಗವಹಿಸಿ ಅಕ್ರಮದ ವಿರುದ್ಧ ಧ್ವನಿ ಎತ್ತಿದರು. ಅಲ್ಲದೆ, ಬೆಟ್ಟದೂರು ಮತ್ತು ನೀರಮಾನ್ವಿ ಗ್ರಾಮದ ಗ್ರಾಮಸ್ಥರು ಉಪಸ್ಥಿತರಿದ್ದರು.

### ಫೋಟೋ ಸುದ್ದಿ



ಧೈರ್ಯದ ದಾರಿ

**ಭರವಸೆಯಂತೆ ಸ್ವಂತ ಹಣದಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗೆ ಓದುವಿನ ಅಗತ್ಯ ವಸ್ತುಗಳನ್ನು ಒದಗಿಸಿದ ತಹಶಿಲ್ದಾರ ಭೀಮರಾಯ ರಾಮಸಮುದ್ರ.**

**ಕೆಲವು ದಿನಗಳ ಹಿಂದೆ ಮಕ್ಕಳ ಹತ್ತನೇ ತರಗತಿಯ ವಿದ್ಯಾಭ್ಯಾಸ ಪರೀಶಿಲನೆ ನಡೆಸುವಾಗ ಪದ್ಮಾವತಿ ತಂದೆ ಆನಂದ ಮದ್ಲಾಪುರ ಅವರ ಮನೆಯೊಳಗೆ ಓದುತ್ತಿರುವ ವಿದ್ಯಾರ್ಥಿಯ ಪರಿಸ್ಥಿತಿ ಕಂಡೆ ಬೇಸರ ವ್ಯಕ್ತಪಡಿಸುತ್ತಾ ತಹಶಿಲ್ದಾರರ ಓದಲು ಅನೂಕೂಲಕರ ಸಾಮಾಗ್ರಿ ಕೊಡಿಸುವುದಾಗಿ ಭರವಸೆ ನೀಡಿದ್ದರು. ಅದರಂತೆ ಮಾತಿಗೆ ತಪ್ಪದೆ ಟೇಬಲ್ ಚೇರ್ ಲೈಟ್ ಊರಿನ ಸಂಪನ್ಮೂಲ ವ್ಯಕ್ತಿ ಮಹಿಬೂಬ್ ಮದ್ಲಾಪುರ ವಾಲಿಕರ್ ನಾಗರಾಜ್ ಅವರೊಂದಿಗೆ ಪೋರೈಸಿದರು.**

## ಜೋಳ ಖರೀದಿ ಪ್ರಕ್ರಿಯೆಯನ್ನು ಕೂಡಲೇ ಪ್ರಾರಂಭಿಸಿ:ದುರುಗಪ್ಪ ತಡಕಲ್



ಧೈರ್ಯದ ದಾರಿ

**ಮಾನ್ವಿ,ಫೆ.20–** ಪಟ್ಟಣದ ಪತ್ರಿಕಾ ಭವನದಲ್ಲಿ ರೈತ ಮುಖಂಡ ದುರುಗಪ್ಪ ತಡಕಲ್ ಮಾತನಾಡಿ ರೈತರು ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಜೋಳವನ್ನು ಮಾರಾಟ ಮಾಡುವುದಕ್ಕೆ ಖರೀದಿ ಕೇಂದ್ರಗಳಲ್ಲಿ ನೊಂದಾಯಿಸಿಕೊಂಡು ಒಂದು ತಿಂಗಳು ಕಳೆದಿದ್ದಾರು ಕೂಡ ಇದುವರೆಗೂ ಸರ್ಕಾರ ಖರೀದಿ ಪ್ರಕ್ರೀಯೆ ಪ್ರಾರಂಭಿಸದೆ ಇರುವುದರಿಂದ ರೈತ ಜೋಳ ಕಾಟವು ಮಾಡಿ ಮೂರು ತಿಂಗಳು ಕಳೆದಿದ್ದು ಜೋಳಕ್ಕೆ ನುಸಿ ಬಂದು ಹಾಳಗುವುದರಿಂದ ರೈತ ಬೆಳೆದ ಜೋಳಕ್ಕೆ ಯಾವುದೆ ಬೆಲೆ ದೊರೆಯದೆ ನಷ್ಟ ಉಂಟಾಗುತ್ತದೆ. ಅದ್ದರಿಂದ ಕೂಡಲೇ ತಾಲೂಕಿನ ಎಲ್ಲಾ ಖರೀದಿ ಕೇಂದ್ರಗಳಲ್ಲಿ ಜೋಳ ಖರೀದಿಗೆ ಅಗತ್ಯವಿರುವ ಲಾರಿಗಳ ವ್ಯವಸ್ಥೆ,ಹಮಾಲಿ ವ್ಯವಸ್ಥೆ,ಖಾಲಿ ಚೀಲದ ವ್ಯವಸ್ಥೆ ಮಾಡಿ ಕೂಡಲೆ ಖರೀದಿ ಮಾಡಬೇಕು ಮುಂದಿನ ದಿನಗಳಲ್ಲಿ ಸರ್ಕಾರ ರೈತರು ಜೋಳ ಕಾಟವು ಮಾಡಿದ ಕೂಡಲೇ ಜೋಳ ಖರೀದಿಗೆ ವ್ಯವಸ್ಥೆ ಮಾಡಬೇಕು ಹಾಗೂ ತಾಲೂಕಿನ ಕುರ್ಡಿ ಹೋಬಳಿಯಲ್ಲಿ ಬೆಳೆದಿರುವ ಹತ್ತಿ ಮತ್ತು ತೋಗರಿ ಬೆಳೆಯನ್ನು ಕೂಡ ಬೆಂಬಲ ಬೆಲೆಯಡಿಯಲ್ಲಿ ಖರೀದಿ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಹನುಮೇಶ ಜೀನೂರು, ಅಜೀತ್ ಕುಮಾರ,ಶಿವಕುಮಾರ ತಡಕಲ್, ಮಹಾದೇವ ತಡಕಲ್ ಇದ್ದರು.

## ತ್ರಿಪದಿ ಕವಿ ಸರ್ವಜ್ಞ ಜಯಂತಿ

ಧೈರ್ಯದ ದಾರಿ

**ಮಾನ್ವಿ,ಫೆ.20–**ಪಟ್ಟಣದ ತಹಶಿಲ್ದಾರ್ ಕಚೇರಿಯಲ್ಲಿ ತ್ರಿಪದಿ ಕವಿ ಸರ್ವಜ್ಞ ಜಯಂತಿ ಅಂಗವಾಗಿ ತ್ರಿಪದಿ ಕವಿ ಸರ್ವಜ್ಞ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗ್ರೇಡ್–2 ತಹಸೀಲ್ದಾರ್ ಅಬ್ದುಲ್ ವಾಹಿದ್ ಮಾತನಾಡಿ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ಮೂರು ಸಾಲುಗಳ ತ್ರಿಪದಿಗಳ ಮೂಲಕ ಸಮಾಜವನ್ನು ತಿದ್ದುವ ಮೂಲಕ ಸರ್ವಜ್ಞ ಕವಿ ವಿಶೇಷ್ಟವಾದ ಸ್ಥಾನವನ್ನು



ಪಡೆದಿದ್ದಾರೆ. ಸರ್ವಜ್ಞನ ತ್ರಿಪದಿಗಳು ಕನ್ನಡದಲ್ಲಿದ್ದು ಅತ್ಯಂತ ಸರಳವಾಗಿವೆ ಹಾಗೂ ಸಮಾಜದಲ್ಲಿನ ಅನೇಕ 2ನೇ ಪುಟಕ್ಕೆ

## ಮಾನ್ವಿ ತಾಲೂಕು 11 ನೇ ಸಮ್ಮೇಳನಾಧ್ಯಕ್ಷರಾಗಿ ಡಾ.ಬಸವಪ್ರಭು ಪಾಟೀಲ್ ಆಯ್ಕೆ



ಧೈರ್ಯದ ದಾರಿ

**ಮಾನ್ವಿ:ಫೆ.20–** ತಾಲೂಕಿನ ಹಿರಿಯ ಸಾಹಿತಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ರವರು ಫೆ.28 ರಂದು ನಡೆಯುವ ಮಾನ್ವಿ ತಾಲೂಕು 11 ನೇ ಕನ್ನಡಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

11 ನೇ ಸಮ್ಮೇಳನಾಧ್ಯಕ್ಷರ ಕಿರು ಪರಿಚಯ: ಹಿರಿಯ ಸಾಹಿತಿ, ರಾಜ್ಯಮಟ್ಟದ ಪತ್ರಿಕೆಯ ತಾಲೂಕು ವರದಿಗಾರರಾಗಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೆ ಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ ಮಾನ್ವಿ ತಾಲೂಕಿನ ಸಣ್ಣ ಗ್ರಾಮ ಬೆಟ್ಟದೂರು ಗ್ರಾಮದಲ್ಲಿ ಚೆನ್ನಬಸವಪ್ಪ ಹಾಗೂ ಅಮರಮ್ಮ ದಂಪತಿಗಳ ಹಿರಿಯ ಪುತ್ರರಾಗಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ರವರು 1947ರ ಜುಲೈ ತಿಂಗಳು ದೇಶಕ್ಕೆ ಸ್ವಾತಂತ್ರ ದೊರೆಯುವ ಸಮಯದಲ್ಲಿ ಜನಿಸಿದವರು. ಬಳ್ಳಾರಿಯ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿಯನ್ನು ಪಡೆದು ಮಾನ್ವಿಯಲ್ಲಿ ಕಲ್ಯಾಣ ವೈದ್ಯಾಲಯದ ಮೂಲಕ ಸಾರ್ವಜನಿಕ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡ ಸಮಯದಲ್ಲಿ ಆಸ್ಪತ್ರೆಗೆ ಬರುವ ವಿವಿಧ ಹಳ್ಳಿಗಳ ಜನರ ಜೀವನ ಬದುಕು,ಅನುಭವಗಳೇ ಇವರ ಸಾಹಿತ್ಯ ಕೃಷಿಗೆ ಮುನ್ನುಡಿಯಾಗಿದರ ಜೋತೆಗೆ ಜನಸಾಮನ್ಯರಾಡುವ ಅವರದೆ ಬಾಷೆಯಲ್ಲಿ ಸಾಹಿತ್ಯವನ್ನು ಕಟ್ಟಿಕೊಡುವ ಬಾಷಶೈಲಿಯನ್ನು ಸಿದ್ದಿಸಿ ಕೊಂಡು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೆ ಆದ ಪ್ರತ್ಯಕವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

**ಕೃತಿಗಳು :** ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮನ್ನು ದುಡಿಸಿಕೊಂಡಿರುವ ಇವರ ಪ್ರಸಿದ್ದ ಕೃತಿಗಳೆಂದರೆ ಮಾತಾಡಿ ಹೆಣಗಳೇ ಕವನ ಸಂಕಲನ, ಇದೇನು ಕತೆ ಟೀಕಾಕೃತಿ, ಮನವೇ ಬೀಜ ಶರಣರ ವಚನಗಳಲ್ಲಿ ಮನಸಿನ ಕುರಿತು ಹೇಳಿದ ಮಾತುಗಳ ಸಂಕಲನ, ನಾಟಕ ಪ್ರಕಾರದಲ್ಲಿ ಬೆಳಗು, ಪ್ರವಾಸ ಕಥನಕಗಳು ಯುರೋಪಿನಲ್ಲಿ ಹಾಗೂ ಬಸವನಾಡಿನಿಂದ ಮಂಡೇಲಾ ನಾಡಿಗೆ , ಸವಿಗಾಳು ಚುಟುಕುಗಳ ಸಂಕಲನ, ಮಾನ್ವಿ ತಾಲೂಕಿನ ಕುರಿತು ಕ್ಷೇತ್ರ ಪರಿಚಯ ಕೃತಿ. ಇಮಾಂಬೀ ಮತ್ತು ಇತರ ಕತೆಗಳು ಕಥಾ ಸಂಕಲನ, ರಾಯಗಡದ ರಾಣಿ, ಇಂದ್ರಿಯ ನಿಗ್ರಹ ಮಾಡಿದರೆ ಕಾದಂಬರಿಗಳು, ಸಂಗಡಿಗರ ಸಮಿತಿ ಮೂಲಕ ಹಲವು ಪುಸ್ತಕಗಳ ಸಂಪಾದನೆ. ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ರಾಯಚೂರಿನಲ್ಲಿ 82 ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಅಯೋಜನೆ. ನಂತರ ಕಸಾಪವನ್ನು ಗ್ರಾಮೀಣ ಭಾಗಕ್ಕೂ ಕೊಂಡೊಯ್ಯುವ ಉದ್ದೇಶದಿಂದ ಮಾನ್ವಿ ತಾಲೂಕಿನ ಪೋತ್ನಾಳ್ ಗ್ರಾಮದಲ್ಲಿ ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಅಯೋಜಿಸುವ ಮೂಲಕ ಗಡಿ ಭಾಗದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ ಹಿರಿಯ ಸಾಹಿತಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ರವರಿಗೆ 11 ನೇ ಸಮ್ಮೇಳನಾಧ್ಯಕ್ಷರ ಮುಕುಟ ಮುಡಿಗೇರಿರುವುದು ತಾಲೂಕಿನ ಕನ್ನಡ ಪ್ರೇಮಿಗಳಿಗೆ ಹೆಮ್ಮೆಮೂಡಿಸಿದೆ



**ಮೊದಲನೇ ಪುಟದಿಂದ**

# ತ್ರಿಪದಿ ಕವಿ ಸರ್ವಜ್ಞ ಜಯಂತಿ

ಕಂದಾಚರಗಳನ್ನು ,ಮೌಢ್ಯಾಚರಣೆಗಳನ್ನು ತಮ್ಮ ತ್ರಿಪದಿಗಳ ಮೂಲಕ ಖಂಡಿಸಿದ್ದಾರೆ. ಅವರ ವಚನಗಳು ಇಂದಿಗೂ ಕೂಡ ಪ್ರಸ್ತತವಾಗಿವೆ ಎಂದು ತಿಳಿಸಿದರು.ತ್ರಿಪದಿ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಉಪತಹಶೀಲ್ದಾರ್ ವಿರುಪ್ಪಣ್ಣ, ಕಂದಾಯ ಇಲಾಖೆ ಸಿಬ್ಬಂದಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಕುಂಬಾರ್ ಸಮಾಜದ ತಾ.ಅಧ್ಯಕ್ಷರಾದ ಕೆ,ಮಲ್ಲೇಶ ಕುಂಬಾರ್ ಬಸವರಾಜಪ್ಪ ಕುಂಬಾರ, ಪಂಪ್ಪಣ್ಣ ಕುಂಬಾರ್ ನೀರಾಮಾನ್ವಿ, ರವಿಕುಮಾರ ಕುಂಬಾರ್, ಪ್ರಹ್ಲಾದ್ ಕುಂಬಾರ್,ಶರಣಪ್ಪ ಕುಂಬಾರ್, ಬಸವ ಕುಂಬಾರ್, ಪ್ರಕಾಶ ಕುಂಬಾರ್, ಡಾ.ಮಲ್ಲಿಕಾರ್ಜುನ ಕುಂಬಾರ್`, ಅರಳಪ್ಪ ಕುಂಬಾರ್, ಮಲ್ಲಪ್ಪ ಕುಂಬಾರ್ ಬಸವರಾಜ ಕುಂಬಾರ್ ನೀರಮಾನ್ವಿ. ಸಿದ್ದು ಕುಂಬಾರ್, ಉಮೇಶ ಕುಂಬಾರ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

# ವೃದ್ಧಾಪ್ಯ ಮತ್ತು ಸಹಾನುಭೂತಿ

ಸುಹಾಸ ಕಾಫಿ ಶಾಪ್ ಒಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದ. ವಿದ್ಯಾರ್ಥಿ ವೇತನದಲ್ಲಿ ಇಂಜಿನಿಯರಿಂಗ್ ಕಾಲೇಜೊಂದರಲ್ಲಿ ಓದುತ್ತಿದ್ದ ಆತ ತನ್ನ ಪ್ರಾಜೆಕ್ಟ್, ಅಸೈನ್ಮೆಂಟ್ ಹಾಗೂ ಮತ್ತಿತರ ಖರ್ಚುಗಳನ್ನು ಸರಿದೂಗಿಸಲು ಕಾಫಿ ಶಾಪ್ ನಲ್ಲಿ ಅರೆಕಾಲಿಕ ಸಪ್ಲಯರ್ ಹುದ್ದೆಯಲ್ಲಿ ಕೆಲ ಗಂಟೆಗಳ ಕಾಲ ಕಾರ್ಯನಿರ್ವಹಿಸಿ ಹಣ ಸಂಪಾದಿಸುತ್ತಿದ್ದನು.

ಅದೊಂದು ದಿನ ಹೀಗೆಯೇ ಹೋಟೆಲಿಗೆ ಬರುವ ಕಸ್ಟಮರ್ಗಳಿಗೆ ಅವರು ಆರ್ಡರ್ ಮಾಡಿದ ತಿನಿಸುಗಳನ್ನು ಕಾಫಿಗಳನ್ನು ತಂದು ಕೊಡುತ್ತಾ ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಮೂಲೆಯ ಮೇಜಿನಲ್ಲಿ ಕುಳಿತ ವೃದ್ಧ ದಂಪತಿಗಳ ಚರ್ಯೆ ಆತನ ಗಮನ ಸೆಳೆಯಿತು.

ಹಳೆಯ ಪ್ಯಾಂಟಿನ ಮೇಲೆ ಬಿಳಿಯ ಬಣ್ಣದ ಷರಟಿನ ಕಾಲರ್ ಹೊರಗೆ ಬರುವಂತೆ ಮಾಡಿ ಸ್ವೆಟರನ್ನು ಹಾಕಿಕೊಂಡಿದ್ದನಾತ.... ಇನ್ನು ಆತನ ಪತ್ನಿ ತಮ್ಮ ಮದುವೆಯಾದ ಹೊಸದರಲ್ಲಿ ಕೊಂಡುಕೊಂಡಿರಬಹುದಾದ, ಅತ್ಯಂತ ಜತನವಾಗಿ ಕಾಯ್ದಿಟ್ಟುಕೊಂಡಂತೆ ತೋರುತ್ತಿದ್ದ ರೇಷ್ಮೆ ಸೀರೆಯನ್ನು ಉಟ್ಟಿದ್ದಳು. ಏನೋ ಗಹನವಾಗಿ ಮಾತನಾಡಿಕೊಳ್ಳುತ್ತಿರುವಂತೆ ತೋರುತ್ತಿದ್ದ ಆ ದಂಪತಿಗಳು ವೇಟರ್ ತಮ್ಮ ಕೈಯಲ್ಲಿ ಇಟ್ಟ ಮೆನುವನ್ನು ಬಹಳ ಸುಧೀರ್ಘ ಕಾಲ ತಿರುವಿ ಹಾಕಿ ಪರಸ್ಪರ ಚರ್ಚೆ ಮಾಡಿ ಅಲ್ಲಿನ ಸ್ಪೆಷಲ್ ತಿಂಡಿಯೊಂದನ್ನು ಆರ್ಡರ್ ಮಾಡಿದರು.... ನಂತರ ಕುಡಿಯಲು ಸ್ವಲ್ಪ ಬಿಸಿಯಾದ ನೀರನ್ನು ಕೂಡ ಕೊಡಲು ಕೇಳಿದರು.

ನಂತರ ಅಲ್ಲಿನ ಸಿಹಿ ತಿಂಡಿಗಳ ಕೌಂಟರಿನೆಡೆ ನಡೆದ ಪತಿಯನ್ನು ಹೆಂಡತಿ ಹಿಂಬಾಲಿಸಿದರು..... ಅತ್ಯಂತ ಮೆಲುವಾಗಿ ಆದರೆ ಅಷ್ಟೇ ದೃಢವಾದ ಧ್ವನಿಯಲ್ಲಿ ಗಂಡನ ಕಿವಿಗೆ ಮಾತ್ರ ಕೇಳುವಂತೆ 'ನಮಗೆ ಕೇಕ್ ಬೇಡ
ಎಂದು ಆಗಲೇ ಹೇಳಿದ್ದೆನಲ್ಲ ನಿಮಗೆ ' ಎಂದು ಪತ್ನಿ ಹೇಳಿದಳು.

ನಮ್ಮ ದಾಂಪತ್ಯದ ಸುವರ್ಣ ಮಹೋತ್ಸವದ ಈ ಸಮಯದಲ್ಲಿ ನನ್ನ ಮಧುಮೇಹದ ಕುರಿತು ಮಾತನಾಡುವುದು ಬೇಡ 50 ವರ್ಷಗಳವರೆಗೂ ನಾವಿಬ್ಬರೂ ಪರಸ್ಪರ ಜೊತೆಯಾಗಿರುವುದೇ ಒಂದು ಸಂತಸದ ವಿಷಯ. ಮಂಡಿಯ ನೋವಿನ ಹೊರತಾಗಿ ನಿನಗಂತೂ ಯಾವುದೇ ಆರೋಗ್ಯದ ತೊಂದರೆಗಳು ಇಲ್ಲ.... ನನ್ನ ಶುಗರ್ ಕೂಡ ಅಷ್ಟೇನು ಹೆಚ್ಚಿಲ್ಲ ಎಂಬುದು ನಿನಗೆ ತಿಳಿದಿದೆ. ನಮ್ಮ ಬದುಕಿನ ಅತ್ಯಂತ ಸಂತಸದ ಈ ದಿನವನ್ನು ಕೇಕ್ ತಿನ್ನುವ ಮೂಲಕ ನಾವು ಆಚರಿಸುವುದರಲ್ಲಿ ತಪ್ಪೇನಿದೆ ಎಂದು ಆತ ಪತ್ನಿಯನ್ನು ಪ್ರಶ್ನಿಸಿದ.

ತನ್ನ ಕನ್ನಡಕವನ್ನು ಮತ್ತಷ್ಟು ಮೇಲಕ್ಕೆ ಏರಿಸಿ ತನಗೆ ಸರಿ ತೋರುವಂತೆ ಹೊಂದಿಸಿಕೊಂಡು ಅಲ್ಲಿದ್ದ ಕೇಕುಗಳಲ್ಲಿ ಅತ್ಯಂತ ಚಿಕ್ಕದಾದ ಅದರಲ್ಲೂ ತಾನು ಖರೀದಿಸಬಲ್ಲೆ ಎಂದು ತೋರುವ ಕೇಕನ್ನು ಆತ ಆರಿಸಿದ.

ಬದುಕಿನ ಸರಿಸುಮಾರು ಅರ್ಧ ಶತಮಾನವನ್ನು ಪತ್ನಿಯೊಂದಿಗೆ ನೆಮ್ಮದಿಯಿಂದ ಕಳೆದ ಸಂತೋಷವನ್ನು ಸಂಭ್ರಮಿಸುತ್ತಿರುವ ಭಾವ ಆತನ ಆ ಕ್ರಿಯೆಯಲ್ಲಿತ್ತು. ಆ ದಂಪತಿಗಳ ನಡುವಿನ ಪ್ರೀತಿ ಭರಿತ ಮಾತುಕತೆಗಳನ್ನು ನೋಡಿ ಸುಹಾಸನಿಗೆ ಮನ ತುಂಬಿ ಬಂತು. ತನ್ನ ಬದುಕಿನುದ್ದಕ್ಕೂ ಕಷ್ಟಪಟ್ಟು ದುಡಿದ ಆ ವ್ಯಕ್ತಿ ತನ್ನ ಪತ್ನಿಗೆ ತಮ್ಮ ದಾಂಪತ್ಯದ ಸುವರ್ಣ ಮಹೋತ್ಸವವನ್ನು ಆಚರಿಸಲು ಬಂದಿದ್ದು ಇದೀಗ ಒಂದು ಪುಟ್ಟ ಕೇಕ್ ಖರೀದಿಸಿ ಸಂಭ್ರಮಿಸಬೇಕೋ ಅಥವಾ ಮರುದಿನ ಯಾವುದೇ ಆರೋಗ್ಯದ ಸಮಸ್ಯೆಗಳಿಲ್ಲದೆ ಏಳಬೇಕೋ ಎಂಬ ಸಂಧಿಗ್ದದಲ್ಲಿ ಇದ್ದ.

ಇದನ್ನು ನೋಡುತ್ತಿದ್ದ ಸುಹಾಸನ ಗಂಟಲು ಕೊಂಚ ಬಿಗಿಯಾಯಿತು. ಕಳೆದ ಎರಡು ಮೂರು ವರ್ಷಗಳಿಂದ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಆತನಿಗೆ ವಯಸ್ಸಾದ ಆ ವ್ಯಕ್ತಿಯ ನೋಟದಲ್ಲಿದ್ದ ಭಾವದ ಅರಿವು ಉಂಟಾಯಿತು.

ಕೂಡಲೇ ಅವರ ಬಳಿ ಹೋಗಿ ನಿಮ್ಮಿಬ್ಬರ ಇಂದಿನ ಊಟದ ಖರ್ಚು ನನ್ನ ಪಾಲಿಗೆ ಇರಲಿ ಎಂದು ಹೇಳಿ ಬಿಡಲೇ ಎಂದು ಒಮ್ಮೆ ಆತ ಯೋಚಿಸಿದ. ಮರುಕ್ಷಣವೇ ಸ್ವಾಭಿಮಾನಿಗಳಾದ ಅವರು ತನ್ನ ಔದಾರ್ಯವನ್ನು ತಿರಸ್ಕರಿಸಬಹುದು ಎಂಬ ಯೋಚನೆ ಆತನಿಗೆ ಹೊಳೆಯಿತು. ಬೇರೆ ಏನು ಇರದಿದ್ದರೂ ಅವರ ಬಳಿ ತಮ್ಮದೇ ಆದ ಘನತೆ ಹಾಗೂ ಸ್ವಾಭಿಮಾನ ಖಂಡಿತವಾಗಿಯೂ ಇತ್ತು.... ಹಾಗೂ ಅದನ್ನು ಕಸಿದುಕೊಳ್ಳಲು ತನಗೆ ಯಾವುದೇ ಹಕ್ಕು ಇಲ್ಲ ಎಂದು ಸುಹಾಸ ಭಾವಿಸಿದ.

ಅಂತಿಮವಾಗಿ ಸುಹಾಸ ಕೊಂಚ ವಿಶೇಷವಾದ ರೀತಿಯಲ್ಲಿ ಅದನ್ನು ಕೊಡ ಮಾಡಲು ಯೋಚಿಸಿದ. ತನ್ನ ಮತ್ತೋರ್ವ ಸಹೋದ್ಯೋಗಿಗೆ ಆ ದಂಪತಿಗಳಲ್ಲಿ ಪತಿ ಇಚ್ಛೆ ಪಟ್ಟ ಕೇಕಿನ ಎರಡು ತುಂಡುಗಳನ್ನು ತಟ್ಟೆಯಲ್ಲಿ ಇಟ್ಟು ಅದರೊಂದಿಗೆ ಕೈಬರಹದ ಪುಟ್ಟ ಹಾಳೆಯನ್ನು ಇಟ್ಟು ಕಳುಹಿಸಿದ.

ನಿಮ್ಮ ಪಕ್ಕದ ಟೇಬಲ್ ಮೇಲೆ ಕುಳಿತಿದ್ದ ಓರ್ವ ವ್ಯಕ್ತಿ
ನಿಮ್ಮ ಇಂದಿನ ಊಟದ ಬಿಲ್ಲನ್ನು ಭರಿಸಿದ್ದಾನೆ. ನೀವಿಬ್ಬರೂ ಆತನಿಗೆ ಆತನ ಗತಿಸಿ ಹೋದ ತಂದೆ ತಾಯಿಯಂತೆ ಭಾಸವಾದಿರಿ ಎಂದು ಅವರು ಹೇಳಿದರು..... ವಿವಾಹ ಸುವರ್ಣ ಮಹೋತ್ಸವದ ಶುಭಾಶಯಗಳು ಎಂದು ಅದರಲ್ಲಿ ಬರೆದಿತ್ತು. ಆ ಬರಹವನ್ನು ಓದಿದ ವೃದ್ಧ ವ್ಯಕ್ತಿ ಬಾಗಿದ ತನ್ನ ಬೆನ್ನನ್ನು ನೇರವಾಗಿಸಿಕೊಂಡು ಕುರ್ಚಿಯ ಬೆನ್ನಿಗೆ ಒರಗಿದ. ಬಡತನದ ಬೇಗೆಯಿಂದ ನರಳಿದ ವ್ಯಕ್ತಿ ಬೇರೆಯುವರಿಂದ ಕಡ ಪಡೆದಂತೆ ಈಗ ಆತ ತೋರುತ್ತಿರಲಿಲ್ಲ... ಬದಲಾಗಿ ತನ್ನನ್ನು ಗುರುತಿಸಿದ ಹಾಗೂ ಗೌರವಿಸಿದ ಭಾವ ಆತನಲ್ಲಿ ಇರುವುದನ್ನು ದೂರದಿಂದಲೇ ಸುಹಾಸ್ ಗಮನಿಸಿದ

ತುಂಬಾ ಹೊತ್ತಿನವರೆಗೆ ಅಲ್ಲಿಯೇ ಕುಳಿತಿದ್ದ ಅವರಿಬ್ಬರೂ ತಮ್ಮ ಬದುಕಿನ ಬಹಳಷ್ಟು ಘಟನೆಗಳನ್ನು ಮರಳಿ ನೆನಪಿಸಿಕೊಂಡರು. ಅವರಿಗೆ ಅರಿವಿಲ್ಲದೆ ಅವರಿಬ್ಬರ ಕೈಗಳು ಬೆಸೆದುಕೊಂಡಿದ್ದವು. ಬಹಳ ಹೊತ್ತಿನ ನಂತರ ಅಲ್ಲಿಂದ ಹೊರಟು ನಿಂತ ಅವರು ತಮ್ಮ ಬಳಿ ಇದ್ದ ಸ್ವಲ್ಪವೇ ಹಣವನ್ನು ಅಲ್ಲಿದ್ದ ತಟ್ಟೆಯೊಂದರಲ್ಲಿ ಇಟ್ಟು ತೆಗೆದುಕೊಳ್ಳಲು ಪರಿಚಾರಕರಿಗೆ ಹೇಳಿ ಹೊರಟು ಹೋದರು. ಹಾಗೆ ಅವರು ಬಿಟ್ಟು ಹೋದ ಹಣವನ್ನು ಜೋಪಾನವಾಗಿ ಎತ್ತಿಟ್ಟುಕೊಂಡ ಸುಹಾಸನ ಪಾಲಿಗೆ ಆ ಹಣ ಅತ್ಯಮೂಲ್ಯವಾದ ಗಳಿಕೆಯಾಗಿತ್ತು.

ನಾವು ಇಂದು ಬದುಕುತ್ತಿರುವ ಈ ಸಮಯ ಬೇರಾರದ್ದೋ ಪಾಲಿಗೆ ಅವರ ಬದುಕಿನ ರಜತ, ಸುವರ್ಣ ಮಹೋತ್ಸವವಾಗಿರಬಹುದು, ಮತ್ತಾವುದೋ ಸಂತೋಷದ ಗಳಿಗೆಯಾಗಿರಬಹುದು. ಇದೀಗ ವಯಸ್ಸಾದವರು ಬಿಡಿಸಲು ಸಾಧ್ಯವಿಲ್ಲದ ಅತ್ಯಂತ ಕ್ಲಿಷ್ಟಕರವಾದ ಬದುಕಿನ ಲೆಕ್ಕಾಚಾರಗಳಲ್ಲಿ ಸೋತು ಹೋಗಿರಬಹುದು. ಖಂಡಿತವಾಗಿಯೂ ಅವರು ಸಹಾಯವನ್ನು ಯಾಚಿಸುವುದಿಲ್ಲ ಬದಲಾಗಿ ಅವರು ಅತ್ಯಂತ ಮೌನವಾಗಿ ತಮ್ಮ ಪಾಳಿಯಲ್ಲಿ ನಿಲ್ಲುತ್ತಾರೆ ಇರುವ ಸ್ವಲ್ಪವೇ ಹಣವನ್ನು ಪದೇಪದೇ ಎಣಿಸಿ ಲೆಕ್ಕ ಹಾಕುತ್ತಾರೆ. ಮನೆಯ ಖರ್ಚು ವೆಚ್ಚಗಳಲ್ಲಿ ಸಾಧ್ಯವಾದಷ್ಟು ಉಳಿಸಿ ಇಂತಹ ಸಂತಸದ ದಿನಗಳಿಗೆ ಹಣವನ್ನು ಹೊಂದಿಸುತ್ತಾರೆ ಎಂಬುದನ್ನು ನೆನಪಿನಲ್ಲಿಡಿ.

ಈ ದಿನ ಕೇವಲ ಒಂದು ಗಂಟೆಯ ಮಟ್ಟಿಗಾದರೂ ಆತ ನಿವೃತ್ತ ಬಡ ನೌಕರ ಅಲ್ಲ....ಆತ ಓರ್ವ ಪತಿ, ಆಕೆಯ ಪ್ರೀತಿಯ ಪತಿ ಎಂಬ ಗೌರವಪೂರ್ವಕ ಭಾವ ಆಕೆಯಲ್ಲಿ ಮೂಡಿಸುವಲ್ಲಿ ಆತ ಸಫಲನಾಗಿರುತ್ತಾನೆ.

ಸ್ನೇಹಿತರೆ,ನಮ್ಮ ಸುತ್ತಲಿನ ಪರಿಸರವನ್ನು ಸದಾ ಒಂದು ಸಹಾನುಭೂತಿಯ ಸೂಕ್ಷ್ಮ ಒಳನೋಟದೊಂದಿಗೆ ಗಮನಿಸಿ.... ವೃದ್ಧ, ಅಸಹಾಯಕ, ಅವಶ್ಯಕತೆಯನ್ನು ಹೊಂದಿರುವ ಸಾಕಷ್ಟು ಜನರು ನಮ್ಮ ಸುತ್ತಲೂ ಇರುತ್ತಾರೆ... ಅವರಿಗೆ ಸಹಾಯ ಮಾಡಲೇ ಎಂದು ಕೇಳಬೇಡಿ ಹಾಗೆ ಕೇಳಿದರೆ ಅವರು ಬೇಡ ಎಂದೇ ಹೇಳಬಹುದು. ಅವರಿಗೆ ನಿಮ್ಮ ಕೈಲಾದಷ್ಟು ಆಹಾರ ಸಾಮಗ್ರಿಗಳನ್ನು, ಒಳ್ಳೆಯ ( ಹಳಸದ,ಕೆಡದ ) ಊಟವನ್ನು ನೀಡಿ. ನೀವು ಬಳಸದೆ ಎತ್ತಿಟ್ಟಿರಬಹುದಾದ ತೊಡಲು ಯೋಗ್ಯವಾದ ಒಳ್ಳೆಯ ಬಟ್ಟೆಗಳನ್ನು ( ತುಂಬಾ ಹಳತಾದ,ಹರಿದ, ಮಾಸಿದ ಬಟ್ಟೆಗಳು ಬೇಡ ) ನೀಡಿ. ನಿಮ್ಮಲ್ಲಿ ಸಾಕಷ್ಟು ತರಕಾರಿ ಹಣ್ಣು ಮಿಕ್ಕಿದೆ ಎಂದು ಒಂದೆರಡನ್ನು ಅವರಿಗೆ ನೀಡಿ.... ಮತ್ತಾರದ್ದೋ ಮಕ್ಕಳ ಶಾಲೆಯ ಫೀಸ್ ಹಣ ತುಂಬಿರಿ ಸಮವಸ್ತ್ರ ಕೊಡಿಸಿ ಪುಸ್ತಕ ಪೆನ್ನು ಪೆನ್ಸಿಲ್ ಗಳಿಗೆ ಧನ ಸಹಾಯ ಮಾಡಿ.

ಕೆಲವೊಮ್ಮೆ ನಾವು ಮಾಡುವ ಸಹಾಯ ಅಪಾತ್ರರಿಗೆ ಸಲ್ಲಬಹುದು ಆ ಕುರಿತು ಸಿನಿಕತೆ ಬೇಡ, ಚಿಂತೆ ಬೇಡ. ಸಹಾಯ ಮಾಡುವುದರ ಕುರಿತು ಅಯ್ಯೋ! ಏನು ಮಾಡಿದರೇನು ಬಿಡಿ. ಇವರಿರೋದೆ ಹಾಗೆ, ಇವರ ಹಣೆಬರಹವೇ ಇಷ್ಟು ಎಂಬ ಭಾವ ಖಂಡಿತವಾಗಿಯೂ ಬೇಡ. ಅವರವರ ಕರ್ಮ ಅವರದು ನಿಮ್ಮ ಕರ್ಮದ ಕುರಿತು ಮಾತ್ರ ನೀವು ಯೋಚಿಸಿ.... ಅವರು ನಿಮ್ಮ ಸಹಾಯದ ಫಲವನ್ನು ಉಂಟು ನಿಮಗೆ ನಿಷ್ಠರಾಗಲಿ ಎಂಬ ಆಶಯ ಬೇಡ.

ಇಂದು ನಾವು ಬದುಕುತ್ತಿರುವ ಈ ಜಗತ್ತನ್ನು ನಿರ್ಮಿಸಿದವರು ಅವರು. ತಾವು ಈ ಜಗತ್ತಿಗೆ ಸಂಬಂಧಿಸಿದವರಲ್ಲ ಎಂಬ ಭಾವ ಅವರಲ್ಲಿ ಖಂಡಿತವಾಗಿಯೂ ಮೂಡ್ದಂತೆ ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ನಮ್ಮದಾಗಬೇಕು
ಏನಂತೀರಾ ಸ್ನೇಹಿತರೆ ?

**ವೀಣಾ ಹೇಮಂತ್ ಗೌಡ ಪಾಟೀಲ್**
**ಮುಂಡರಗಿ ಗದಗ್**

**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ**
**6360866626**

# ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ರಾಜ್ಯದಲ್ಲಿ 2 ದಿನ ಮಳೆ ಸಾಧ್ಯತೆ



**ಬೆಂಗಳೂರು, ಫೆ.20–**ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತ ಪರಿಣಾಮದಿಂದ ರಾಜ್ಯದ ದಕ್ಷಿಣ ಒಳನಾಡು, ಮಲೆನಾಡು ಹಾಗೂ ಕರಾವಳಿ ಭಾಗದಲ್ಲಿ ಚದುರಿದಂತೆ ಕೆಲವೆಡೆ ಮಳೆಯಾಗುವ ಮುನ್ಸೂಚನೆಗಳಿವೆ.

ಇಂದಿನಿಂದ ಭಾನುವಾರದವರೆಗೆ ರಾಜ್ಯದ ಕೆಲವೆಡೆ ಅಕಾಲಿಕ ಹಗುರ ಮಳೆಯಾಗುವ ಸಾಧ್ಯತೆಗಳಿವೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.ತಾಪಮಾನ ಏರಿಕೆಯಿಂದಾಗಿ ಸ್ಥಳೀಯವಾಗಿ ಕಡಿಮೆ ಗಾಳಿ ಒತ್ತಡ ವಾತಾವರಣ ಉಂಟಾಗಿ ಬೇಸಿಗೆಯಲ್ಲಿ ಮಳೆಯಾಗುವುದು ಸಹಜ ಪ್ರಕ್ರಿಯೆ. ಆದರೆ, ಚಳಿಗಾಲ ಆರಂಭಕ್ಕೂ ಮುನ್ನವೇ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿದೆ.

ಇದರ ಜೊತೆಗೆ ಬಂಗಾಳ ಕೊಲ್ಲಿಯಲ್ಲಿ ಲಘು ವಾಯುಭಾರ ಕುಸಿತವಾಗಿದ್ದು, ತಮಿಳುನಾಡು, ಶ್ರೀಲಂಕಾ ಹಾಗೂ ಅಂಡಮಾನ್ ನಿಕೋಬಾರ್ ದ್ವಿ?ಪದ ಕಡೆಗಳಲ್ಲಿ ಮಳೆ ನಿರೀಕ್ಷಿಸಬಹುದಾಗಿದೆ ಎಂದು ಹವಾಮಾನ ತಜ್ಞ ವಿ.ಎಸ್.ಪ್ರಕಾಶ್ ಹೇಳಿದ್ದಾರೆ.

ವಾಯುಭಾರ ಕುಸಿತ ಪರಿಣಾಮದಿಂದ ರಾಜ್ಯದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ದಕ್ಷಿಣ ಒಳನಾಡಿನಲ್ಲಿ ಚದುರಿದಂತೆ ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆಗಳು ಕಂಡು ಬರುತ್ತಿವೆ. ರಾಜ್ಯದಲ್ಲಿ ಒಣ ಹವೆ ಮುಂದುವರೆಯಲಿದ್ದು, ವ್ಯಾಪಕವಾಗಿ ಎಲ್ಲೆಡೆ ಮಳೆಯಾಗುವುದಿಲ್ಲ. ಅಲ್ಲಲ್ಲಿ ಮಾತ್ರ ಮಳೆಯಾಗುವ ಸಾಧ್ಯತೆಗಳಿವೆ ಎಂದು ಅವರು ತಿಳಿಸಿದ್ದಾರೆ.ಭಾನುವಾರದವರೆಗೂ ಮಳೆಯಾಗುವ ಲಕ್ಷಣಗಳು ಕಂಡುಬರುತ್ತಿವೆ. ಫೆಬ್ರವರಿಯ ನಂತರ ಬೇಸಿಗೆ ಮಳೆ ಕೆಲವೆಡೆ ಆಗುವುದು ಸ್ವಾಭಾವಿಕ. ವಾಯುಭಾರ ಕುಸಿತದಿಂದ ತಮಿಳುನಾಡಿನಲ್ಲಿ ಹೆಚ್ಚು ಮಳೆಯಾಗಬಹುದು. ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲವೆಡೆ ಹಗುರ ಮಳೆ ಇನ್ನೆರಡು ದಿನ ಬೀಳುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ.

# ವಾಲ್ಮೀಕಿ ಶ್ರೀಗಳು ಬೇಗ ಚೇತರಿಸಿಕೊಳ್ಳಲಿ ಎಂದು ನೀರಮಾನ್ವಿ ಯಲ್ಲಮ್ಮ ದೇವಿಗೆ ವಿಶೇಷ ಪೂಜೆ



ಧೈರ್ಯದ ದಾರಿ

**ಮಾನ್ವಿ,ಫೆ.20–** ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಜಗದ್ಗುರು ಡಾ.ವಾಲ್ಮೀಕಿ ಪ್ರಸನ್ನಾನಂದ ಪುರಿ ಮಹಾಸ್ವಾಮಿಗಳು ಆರೋಗ್ಯದಲ್ಲಿ ಏರುಪೇರು ಅಗಿ ಆಸ್ಪತ್ರೆ ದಾಖಲಾಗಿರುವ

ಶ್ರೀಗಳು ಬೇಗ ಗುಣಮುಖರಾಗಲೇಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ಯುವ ಘಟಕದ ಜಿಲ್ಲಾಧ್ಯಕ್ಷ ಶರಣಬಸವ ನಾಯಕ ಜಾನೇಕಲ್ ನೇತೃತ್ವದಲ್ಲಿ ಶುಕ್ರವಾರ ನೀರಮಾನ್ವಿ ಯಲ್ಲಮ್ಮ ದೇವಿಗೆ ವಿಶೇಷ ಪೂಜೆ ನೇರವೇರಿಸಿದರು.

ಈ ವೇಳೆ ಜಿಲ್ಲಾಧ್ಯಕ್ಷ ಶರಣಬಸವ ನಾಯಕ ಜಾನೇಕಲ್

ಮಾತನಾಡಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಜಗದ್ಗುರು ಡಾ.ವಾಲ್ಮೀಕಿ ಪ್ರಸನ್ನಾನಂದ ಪುರಿ ಮಹಾಸ್ವಾಮಿಗಳು ಲಘು ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆ ದಾಖಲಾಗಿರುವ ವಿಷಯ ತಿಳಿದು ಮನಸ್ಸಿಗೆ ಬೇಸರ ತಂದಿದೆ. ಶ್ರೀಗಳು ಸಂಪೂರ್ಣ ಗುಣಮುಖರಾಗಿ ಎಂದಿನಂತೆ ಸಮಾಜಮುಖಿ ಚಟುವಟಿಕೆಗಳಲ್ಲಿ ಮತ್ತೆ ಸಕ್ರಿಯರಾಗಲಿ ಎಂದರು.

ಈ ಸಂದರ್ಭಗಳಲ್ಲಿ ಭೀಮಯ್ಯ ನಾಯಕ, ಚನ್ನಬಸವ ನಾಯಕ,ದೇವಸ್ಥಾನದ ಪ್ರಧಾನ ಅರ್ಚಕರಾದ ಪೂಜಾರಿ ಮಲ್ಲಿಕಾರ್ಜುನ, ಗೋಪಾಲ್ ನಾಯಕ್ ನೀರಮಾನವಿ , ಹನುಮೇಶ್ ನಾಯಕ ನೀರಮಾನವಿ ,ಕೃಷ್ಣ ನಾಯಕ ಮದ್ಲಾಪೂರ , ಬಸವ ನೀರಮಾನವಿ, ವೆಂಕಿ ನಾಗಪ್ಪ ನಾಯಕ, ಶೀವು ನಾಯಕ ನೀರಮಾನವಿ ಆಂಜಿನೇಯ್ಯ, ಚಿದಾನಂದ್, ಸುರೇಶ ನಾಯಕ ,ಮಂಜುನಾಥ ನಾಯಕ ತುಪ್ಪದೂರು, ಅಭಿ ನಾಯಕ ತುಪ್ಪದೂರ ,ಮಹೇಶ್ ನಾಯಕ ಉಪಸ್ಥಿತರಿದ್ದರು.

# ನ್ಯೂನ್ಯತೆಯುಳ್ಳ ಮಕ್ಕಳಿಗೆ ತಜ್ಞವೈದ್ಯರಿಂದ ತಪಾಸಣೆ ಶಿಬಿರ



ಧೈರ್ಯದ ದಾರಿ

**ರಾಯಚೂರು ಫೆ,20–** ಆರ್‌ಬಿಎಸ್‌ಕೆ ವೈದ್ಯಕೀಯ ತಂಡವು ಕ್ಷೇತ್ರ ಮಟ್ಟದಲ್ಲಿ ಗುರುತಿಸಿದ ನ್ಯೂನ್ಯತೆಯುಳ್ಳ ಮಕ್ಕಳಿಗೆ ತಜ್ಞ ವೈದ್ಯರಿಂದ ಫೆ.20ರಂದು ತಪಾಸಣೆ ಶಿಬಿರ ನಡೆಯಿತು.

ರಾಯಚೂರು ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ನಡೆದ ಈ ಶಿಬಿರದಲ್ಲಿ ಹುಟ್ಟಿನಿಂದ 18 ವರ್ಷದೊಳಗಿನ ಜನ್ಮಜಾತ ಹೃದಯ ಖಾಯಿಲೆಯ 14 ಮಕ್ಕಳು, ಶೀಳು ತುಟಿ, ಶೀಳು ಅಂಗಳದ 3 ಮಕ್ಕಳಿಗೆ ತಪಾಸಣೆ ಮಾಡಲಾಯಿತು. ಮಕ್ಕಳ ತಜ್ಞರಾದ ಡಾ.ಇಮ್ರಾನ್ ತಪಾಸಣೆ ನಡೆಸಿದರು.

ಜಿಲ್ಲೆಯಲ್ಲಿ ಪ್ರಸ್ತುತ 12 ಆರ್‌ಬಿಎಸ್‌ಕೆ ವೈದ್ಯಕೀಯ ತಂಡಗಳ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ತಂಡದಲ್ಲಿ ವೈದ್ಯರು, ಶೂಶ್ರೂಷಕರು, ನೇತ್ರಾಧಿಕಾರಿಗಳು ಇದ್ದು, ಅಂಗನವಾಡಿ, ಶಾಲೆಗಳಲ್ಲಿ ತಪಾಸಣೆ ಕೈಗೊಂಡು ರಾಯಚೂರಿನ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಮುಖ್ಯ ವೈದ್ಯಾಧಿಕಾರಿ ಡಾ.ಪ್ರಜ್ವಲ್ ಕುಮಾರ್ ನೇತೃತ್ವದಲ್ಲಿ ಪ್ರತಿ ಮಂಗಳವಾರ, ಶುಕ್ರವಾರ ಮಕ್ಕಳ ತಜ್ಞರಿಂದ ತಪಾಸಣೆ ಮಾಡಿಸಲಾಗುತ್ತದೆ. ಇದಕ್ಕೆ ನವೋದಯ ಹಾಗೂ ರಿಮ್ಸ್ ಆಸ್ಪತ್ರೆಯ ತಜ್ಞರು ಕೈಜೋಡಿಸಿದ್ದಾರೆ.

ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರ: ಮಕ್ಕಳ ಬೆಳವಣಿಗೆಗೆ ಕಾರಣವಾಗುವ ನಾಲ್ಕು ಕಾರಣಗಳನ್ನು ಗುರುತಿಸಿ ಮಕ್ಕಳ ತಜ್ಞರು, ಇಎನ್‌ಟಿ ತಜ್ಞರು, ಮಾನಸಿಕ ತಜ್ಞರು, ಪೀಜಿಯೋ ಥೆರಪಿಸ್ಟ್ ಅವರು ಅಗತ್ಯ ಚಿಕಿತ್ಸೆ, ಸಲಹೆಗಳನ್ನು ನೀಡುತ್ತಾರೆ. ಪ್ರಸ್ತುತ ಪ್ರತಿದಿನ 15-20 ಮಕ್ಕಳು ಕೇಂದ್ರದ ಸದುಪಯೋಗ ಪಡೆಯುತ್ತಿದ್ದಾರೆ.

ಖಾಸಗಿ ಆಸ್ಪತ್ರೆಗಳಲ್ಲಿ ಸಹ ಚಿಕಿತ್ಸೆ: ಜನ್ಮಾಜಾತ ಹೃದಯ ಸಂಬಂಧಿ ಖಾಯಿಲೆಗಳ ತುರ್ತು ಶಸ್ತ್ರಚಿಕಿತ್ಸೆಗಳಿಗಾಗಿ ಸರಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡ ಬೆಂಗಳೂರಿನ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಮಾತನಾಡಿ, ಪಾಲಕರು ತಮ್ಮ ಮಗುವಿಗೆ ಆರೋಗ್ಯ ಸಮಸ್ಯೆಗಳಿಗೆ ಹಲವು ಬಾರಿ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಆರ್ಥಿಕ ತೊಂದರೆಗೊಳಗಾಗುವುದನ್ನು ತಪ್ಪಿಸಲು ಸರಕಾರ ಅನುಷ್ಠಾನ ಮಾಡಿರುವ ಯೋಜನೆ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮವಾಗಿದೆ. ಮಕ್ಕಳ ಜನನದ ನಂತರದ ಆರಂಭದಲ್ಲಿ ಕಂಡು ಬರುವ ಬೆಳವಣಿಗೆಗೆ ಕುಂಠಿತವಾಗುವ ಗಂಭೀರ ಆರೋಗ್ಯ ಸಮಸ್ಯೆಗಳಾದ ಜನ್ಮಾಜಾತ ಹೃದಯ ಸಂಬಂಧಿ ಖಾಯಿಲೆಗಳು (ಸಿಹೆಚ್‌ಡಿ), ಸೀಳು ತುಟಿ, ವಕ್ರಪಾದ, ಮಾನಸಿಕ ಆರೋಗ್ಯ ಸಮಸ್ಯೆಗಳು, ಸೀಳು ಅಂಗಳ, ಕೀವಿ ಕೇಳದಿರುವುದು, ದೈಹಿಕ ನ್ಯೂನ್ಯತೆಗಳಿರುವವರಿಗೆ ಪೀಜಿಯೋಥೆರಪಿ ಸೇರಿದಂತೆ ಮಗುವಿನ ಬೆಳವಣಿಗೆಗೆ ಅಡ್ಡಿಪಡಿಸುವ ಆರೋಗ್ಯ ಸಮಸ್ಯೆಗಳಿಗೆ ರಾಷ್ಟ್ರೀಯ ಬಾಲ್ಯ ಸ್ವಾಸ್ಥ್ಯ ಕಾರ್ಯಕ್ರಮದಡಿ ಮಕ್ಕಳಿಗೆ ಉಚಿತ ಪರೀಕ್ಷೆ, ಅಗತ್ಯವಿರುವ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಸಹ ಕೈಗೊಳ್ಳಲಾಗುತ್ತಿದ್ದು ಪಾಲಕರು ನೆಮ್ಮದಿಯಿಂದ ತಮ್ಮ ಮುದ್ದು ಮಗುವಿನ ಸಂತಸದ ಕ್ಷಣಗಳನ್ನು ಆಸ್ವಾದಿಸಲು ಸಾಧ್ಯವಾಗುತ್ತಿದೆ ಎಂದು ತಿಳಿಸಿದರು.

ಸಿಹೆಚ್‌ಡಿ ಪತ್ತೆಗಾಗಿ ರಾಯಚೂರು ಜಿಲ್ಲೆಯಲ್ಲಿ ಓಪೆಕ್ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯೊಂದಿಗೆ ಇಕೊ ಟೆಸ್ಟ್ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಇದರಿಂದ ಸಮಯ ಉಳಿತಾಯವಾಗಲಿದೆ. ಎಲ್ಲ ತಾಲೂಕುಗಳಲ್ಲಿ ಗುರುತಿಸಲ್ಪಟ್ಟ ಸಮಸ್ಯೆ ಇರುವ ಮಕ್ಕಳನ್ನು ಇಲ್ಲಿ ತಪಾಸಣೆ ಮಾಡಲಾಗುವುದು ಎಂದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದೀತಾ ಎಮ್ ಎನ್ ಮಾತನಾಡಿ, ಜಿಲ್ಲೆಯಲ್ಲಿ ನವಜಾತ ಶಿಶುಗಳ ಕುಂಠಿತ ಬೆಳವಣಿಗೆಗೆ ಕಾರಣವಾಗುವ ಗಂಭೀರ ಸಮಸ್ಯೆಗಳಿಗೆ ಪಾಲಕರಿಗೆ ಆರ್ಥಿಕ ಹೊರೆಯನ್ನು ತಪ್ಪಿಸಿ ಅಗತ್ಯ ವೈದ್ಯಕೀಯ ಪರೀಕ್ಷೆ, ಚಿಕಿತ್ಸೆ, ಅನುಸರಣೆ ಕೈಗೊಂಡು ನೆಮ್ಮದಿಯ ಭವಿಷ್ಯಕ್ಕೆ ನಿಮ್ಮ ಆರೋಗ್ಯ – ನಮ್ಮ ಆದ್ಯತೆ ಎಂಬ ಧ್ಯೇಯದಂತೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.


ಇಂದಿನ ತಪಾಸಣೆ ವೇಳೆ ಡಾ.ಸಂಧ್ಯಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಹಿರಿಯ ಶುಶ್ರೂಷಣಾಧಿಕಾರಿ ಸಲೋಮಿ, ಡಿವೈಹೆಚ್‌ಇಓ ಬಸಯ್ಯ, ಡಿಪಿಎಮ್ ನವೀನ್‌ಕುಮಾರ, ಆರ್‌ಬಿಎಸ್‌ಕೆ ಕಲ್ಸಂಟ್ ಸಿದ್ದಮ್ಮ, ಬಿಹೆಚ್‌ಇಓ ಸರೋಜಾ ಕೆ, ಡಿಇಐಸಿ ತಂಡದ ಸಿಬ್ಬಂದಿ ಉಪಸ್ಥಿತರಿದ್ದರು.

# ಸಿಯುಕೆಯಲ್ಲಿ ನವೋಧ್ಯಮ ಪರಿಸರ ವ್ಯವಸ್ಥೆಯ ಕುರಿತು ಕಾರ್ಯಾಗಾರ



**ಕಲಬುರಗಿ:ಫೆ.20:**"ಉನ್ನತ ಶಿಕ್ಷಣದಲ್ಲಿ ಉದ್ಯಮಶೀಲತಾ ಚಿಂತನೆ ಇಂದಿನ ಅಗತ್ಯವಾಗಿದೆ. ವಿದ್ಯಾರ್ಥಿಗಳು ಸಾಂಪ್ರದಾಯಿಕ ವೃತ್ತಿ ಮಾರ್ಗಗಳನ್ನು ಮೀರಿ ನವೋಧ್ಯಮಗಳನ್ನು ಪ್ರಾರಂಭಿಸುವತ್ತ ಗಮನ ಹರಿಸಬೇಕು ಮತ್ತು ಅದೊಂದು ಪ್ರಭಾವಶಾಲಿ ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳಬೇಕು" ಎಂದು ಆಂಧ್ರಪ್ರದೇಶದ ಯೋಗಿ ವೇಮನ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಮುಖ್ಯಸ್ಥ ಪ್ರೊ. ಎಸ್. ರಘುನಾಥ ರೆಡ್ಡಿ ಹೇಳಿದರು. ನಿನ್ನೆ ಅವರು ಕಲಬುರಗಿಯ ಕರ್ನಾಟಕ ಕೇಂದ್ರ ವಿಶ್ವವಿದ್ಯಾಲಯದ ವಾಣಿಜ್ಯ ಅಧ್ಯಯನ ನಿಕಾಯದ ವಾಣಿಜ್ಯ ವಿಭಾಗವು ಆಯೋಜಿಸಿದ್ದ ನವೋಧ್ಯಮ ಪರಿಸರ ವ್ಯವಸ್ಥೆಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿದ ನಂತರ ಮಾತನಾಡುತ್ತಿದ್ದರು.
ಸಿಯುಕೆಯ ಇನ್ಕ್ಯುಬೇಷನ್ ಸೆಂಟರ್‌ನ ನಿರ್ದೇಶಕ ಡಾ. ರಾಜೀವ ಜೋಶಿ ಮಾತನಾಡಿ, "ಮಾರ್ಗದರ್ಶನ, ಹಣಕಾಸು ಬೆಂಬಲ ಮತ್ತು ಉದ್ಯಮ ಸಂಪರ್ಕಗಳ ಮೂಲಕ ವಿದ್ಯಾರ್ಥಿ ಉದ್ಯಮಿಗಳನ್ನು ಬೆಂಬಲಿಸಲು ವಿಶ್ವವಿದ್ಯಾಲಯದಲ್ಲಿ ಇನ್ಕ್ಯುಬೇಷನ್ ಸೆಂಟರ್ ಅನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಬೇಕು" ಎಂದು ಹೇಳಿದರು.
ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಇಡಿಎಂ) ನ ಕಲಬುರಗಿ ಕ್ಲಸ್ಟರ್‌ನ ಮುಖ್ಯಸ್ಥರಾದ ಶ್ರೀ. ಸುಜಯ ಮುದ್ಗಲ್ ಅವರು ಸರ್ಕಾರದ ಉಪಕ್ರಮಗಳು, ಡಿಜಿಟಲ್ ಆರ್ಥಿಕತೆಯಲ್ಲಿನ ಅವಕಾಶಗಳು ಮತ್ತು ನವೋದ್ಯಮಗಳಿಗೆ ನೀತಿಯ ಬೆಂಬಲದ ಕುರಿತು ಮಾತನಾಡಿದರು.
ಕಲಬುರಗಿಯ ಇಮ್ಮೈಲ್ ಏಜ್ ಇನಿಶಿಯೇಟಿವ್ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥಾಪಕ ಮತ್ತು ಸಿಇಒ ಶ್ರೀ. ಬಸವರೆಡ್ಡಿ ಎಸ್.ಎಂ. ಅವರು ತಮ್ಮ ಉದ್ಯಮಶೀಲತಾ ಅನುಭವವನ್ನು ಹಂಚಿಕೊಂಡರು ಮತ್ತು ಸುಸ್ಥಿರ ನವೋದ್ಯಮಗಳನ್ನು ನಿರ್ಮಿಸುವಲ್ಲಿನ ಸವಾಲುಗಳು ಮತ್ತು ಅವಕಾಶಗಳ ಕುರಿತು ಚರ್ಚಿಸಿದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಕೂಲ್ ಆಫ್ ಬಿಸಿನೆಸ್ ಸ್ಟಡೀನ ಡೀನ್ ಪ್ರೊ. ಪಾಂಡುರಂಗ ವಿ. ವಹಿಸಿದ್ದರು, ಅವರು ಶೈಕ್ಷಣಿಕ ಸಂಸ್ಥೆಗಳು ನಾವೀನ್ಯತೆ–ಚಾಲಿತ ಕಲಿಕೆ ಮತ್ತು ಉದ್ಯಮದ ತೊಡಗಿಸಿಕೊಳ್ಳುವಿಕೆಯನ್ನು ಸಕ್ರಿಯವಾಗಿ ಉತ್ತೇಜಿಸುವ ಅಗತ್ಯವನ್ನು ಒತ್ತಿ ಹೇಳಿದರು.
ಕಾರ್ಯಕ್ರಮ ಸಂಯೋಜಕರಾದ ಡಾ. ಜಿ. ರಂಗನಾಥಮ ಅವರು ಕಾರ್ಯಕ್ರಮವನ್ನು ನಿರೂಪಿಸಿ ಎಲ್ಲರನ್ನೂ ಸ್ವಾಗತಿಸಿದರು.
ಪ್ರೊ. ಪದ್ಮಶ್ರೀ, ಪ್ರೊ. ಎಂ. ಎ ಅಸ್ಲಾಂ, ಡಾ. ಮಹೇಂದ್ರ, ಡಾ. ರಾಜಲಿಂಗಂ, ಅಧ್ಯಾಪಕ ಸದಸ್ಯರು, ಸಂಶೋಧನಾ ವಿದ್ವಾಂಸರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಶಿವಾಜಿ ಧರ್ಮಸಹಿಷ್ಣುತೆಯ ಪ್ರತೀಕ : ಡಾ. ದಯಾನಂದ ಶಾಸ್ತ್ರಿ



**ಕಲಬುರಗಿ:ಫೆ.20:**ಮಹಿಳಾ ಗೌರವದ ರಕ್ಷಣೆ ಮತ್ತು ಧರ್ಮಸಹಿಷ್ಣುತೆಯ ಮೌಲ್ಯಗಳನ್ನು ಕಾಪಾಡಿದ ನಾಯಕನಾಗಿ ಅವರು ಇಂದಿಗೂ ಪ್ರಸ್ತುತರಾಗಿದ್ದಾರೆ ಎಂದು ಡಾ. ದಯಾನಂದ ಶಾಸ್ತ್ರಿಯವರು ಹೇಳಿದರು.

ಕಲಬುರಗಿ ನಗರದ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದಲ್ಲಿ ಎನ್.ಎಸ್.ಎಸ್. ಘಟಕ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಶಿವಾಜಿ ಜಯಂತಿ' ಗುರುವಾರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ದಯಾನಂದ ಶಾಸ್ತ್ರಿಯವರು ಮಾತನಾಡಿ ಸ್ವರಾಜ್ಯದ ಸಂಕಲ್ಪ, ಧೈರ್ಯ ಮತ್ತು ಆಡಳಿತದ ದೃಢತೆ ಶಿವಾಜಿಯವರ ಜೀವನದ ಪ್ರಮುಖ ಸಂದೇಶಗಳೆಂದು ಹೇಳಿದರು. 'ಗೇರಿಲ್ಲಾ' ಯುದ್ಧ ನೀತಿಯಿಂದ ಆದಿಲ್ ಶಾಹಿ, ಪೋರ್ಚಗೀಸ್ ಹಾಗೂ ಮೊಘಲರ ವಿರುದ್ಧ ಹೋರಾಡಿ ಸ್ವರಾಜ್ಯ ಕಟ್ಟಿದ್ದನ್ನು ನಾವು ಸ್ಮರಿಸಬೇಕಿದೆ. ವಿದ್ಯಾರ್ಥಿಗಳು ಅವರ ಆದರ್ಶಗಳನ್ನು ಅಳವಡಿಸಿಕೊಂಡು ಸಮಾಜ ನಿರ್ಮಾಣದಲ್ಲಿ ಮುನ್ನಡೆಯಬೇಕು ಎಂದು ಕರೆ ನೀಡಿದರು. ವೇದಿಕೆಯಲ್ಲಿ ಮಹಾವಿದ್ಯಾಲಯದ ಉಪಪ್ರಾಚಾರ್ಯರಾದ ಡಾ. ಗುರುಮಧ್ವಾಚಾರ್ಯ ನವಲೆ, ನಿರ್ದೇಶಕರಾದ ಪ್ರೊ??. ಗೋವಿಂದ ಪೂಜಾರ ಹಾಗೂ ಸಂಗೀತ ವಿಭಾಗದ ಮುಖ್ಯಸ್ಥರಾದ ಡಾ. ಮಹೇಶಕುಮಾರ ಈ. ಬಡಿಗೇರ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಕುಮಾರಿ ಸಂಜನಾ ಪ್ರಾರ್ಥನೆ ಗೀತೆ ಹಾಡಿದರು. ಡಾ. ಮಲ್ಲಿನಾಥ ಎಸ್. ತಳವಾರ ನಿರೂಪಿಸಿದರು. ಡಾ. ವಿಷ್ಣು ಗುಂಡಗುರ್ಕಿಯವರು ವಂದಿಸಿದರು.

# ಸಮಾಜಕ್ಕೆ ಛತ್ರಪತಿ ಶಿವಾಜಿ ಕೊಡುಗೆ ಅಪಾರ: ಸಿ.ಎನ್ ಮಂಜೇಗೌಡ



**ಮೈಸೂರು: ಫೆ.20:–** ಛತ್ರಪತಿ ಶಿವಾಜಿಯು ಈ ಸಮಾಜಕ್ಕೆ ಕೊಟ್ಟ ಕೊಡುಗೆಗಳ ಬಗ್ಗೆ ನಮ್ಮ ಇಂದಿನ ಪೀಳಿಗೆಗಳು ತಿಳಿದುಕೊಳ್ಳಬೇಕು ಅವರು ತೋರಿಸಿಕೊಟ್ಟಂತಹ ಮಾರ್ಗದಲ್ಲಿ ಇಂದು ನಮ್ಮ ಜೀವನಗಳ ನಡೆಸಬೇಕು.
ಛತ್ರಪತಿ ಶಿವಾಜಿಯ ಸಾಮ್ರಾಜ್ಯವು ಶಕ್ತಿಯುತ ಸೇನಾಧಿಪತಿಗಳಿಂದ ತುಂಬಿತ್ತು. ಮೊಘಲ್ ರಾಜರ ವಿರುದ್ಧ ಹೋರಾಡಿ ಯುದ್ಧದಲ್ಲಿ ಜಯ ಸಾಧಿಸಿದಂತ ವ್ಯಕ್ತಿ ಶಿವಾಜಿ. ಅವರ ಜೀವನದಲ್ಲಿ ಗೆರಿಲ್ಲಾ ಯುದ್ಧ ಬಹಳ ಮಹತ್ವಪೂರ್ಣವಾದದ್ದು ಎಂದು ವಿಧಾನಪರಿಷತ್ತಿನ ಶಾಸಕರಾದ ಸಿ.ಎನ್ ಮಂಜೇಗೌಡ ಅವರು ಹೇಳಿದರು.

ಜಿಲ್ಲಾಡಳಿತ , ಕನ್ನಡ ಮತ್ತು ಸಂಸ್ಕೃತ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ಛತ್ರಪತಿ ಶಿವಾಜಿ ಜಯಂತಿಯ ಅಧ್ಯಕ್ಷತೆ ವಹಿಸಿ ಉದ್ಘಾಟಿಸಿ ಮಾತನಾಡಿದ ಅವರು ಇಂದಿನ ಮಕ್ಕಳು ಶಿವಾಜಿಯವರ ಬಗ್ಗೆ ಅತಿ ಹೆಚ್ಚು ಮಾಹಿತಿಯನ್ನು ತಿಳಿದುಕೊಳ್ಳಬೇಕು. ಪ್ರತಿಯೊಬ್ಬರ ಮನೆಯಲ್ಲೂ ಛತ್ರಪತಿ ಶಿವಾಜಿ ಅವರ ಭಾವಚಿತ್ರಗಳನ್ನು ಇಡಬೇಕು. ಅವರ ಸ್ಪೂರ್ತಿ ನಿಮ್ಮೆಲ್ಲರಿಗೂ ದಾರಿದೀಪವಾಗಬೇಕು ಎಂದು ತಿಳಿಸಿದರು

ಡಾ. ಆರ್ ಚಲಪತಿ ಅವರು ಉಪನ್ಯಾಸ ನೀಡಿ ಮಾತನಾಡಿ ಶಿವಾಜಿಯು ಜನತೆಯ ರಾಜ ಮತ್ತು ಪ್ರಜೆಗಳ ಮನಸ್ಸಿನಲ್ಲಿ ಬೇರೂರಿದಂತಹ ವೀರ. ಶಿವಾಜಿಯನ್ನು ಶತ್ರುಗಳು ಸಹ ಪ್ರೀತಿಸುತ್ತಿದ್ದರಂತೆ. ಪ್ರಜೆಗಳು ರಾಜನಿಗೆ ಪ್ರಾಣವನ್ನು ನೀಡುವಂತಹ ಪ್ರೀತಿ ಗೌರವ ಸಂಪಾದಿಸಿದ್ದರು. ಅಂದು ಶಿವಾಜಿಯ ಸಾಮ್ರಾಜ್ಯದಲ್ಲಿ ಸೈನಿಕರಿಗೆ ಯಾವುದೇ ಹೆಂಗಸರ ಮೈ ಮೇಲೆ ಕೈ ಹಾಕಬಾರದೆಂದು ಎಚ್ಚರಿಕೆ ನೀಡಿದರಂತೆ. ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದರೆ ಅವರ ಕಣ್ಣುಗಳನ್ನು ಕಿತ್ತು ಸೆರೆವಾಸಕ್ಕೆ ತಳ್ಳುತ್ತಿದ್ದರು ಇವರ ಸಾಮ್ರಾಜ್ಯದಲ್ಲಿ ಮಹಿಳೆಯರಿಗೆ ಗೌರವಯುತವಾದ ಸ್ಥಾನವಿತ್ತು ಎಂದು ತಿಳಿಸಿದರು.
ಯುದ್ಧಕ್ಕೆ ತೆರಳುವಾಗ ರೈತರ ಗದ್ದೆಗಳ ಮೇಲೆ ಹೋಗಬಾರದು. ರೈತರ ಬೆಳೆಗೆ ನಾಶವಾಗಬಾರದೆಂದು ಎಂದು ಸೈನಿಕರಿಗೆ ಎಚ್ಚರಿಕೆ ನೀಡಿದ್ದರು. ರೈತರಿಗೆ ಬರ ಬಂದಾಗ ಕಂದಾಯವನ್ನು ವಸಲಿ ಮಾಡಬಾರದೆಂದು ಆದೇಶ ನೀಡಿದರು. ಬರಗಾಲ ನೀಗುವವರೆಗೂ ಸಾಮ್ರಾಜ್ಯದಲ್ಲಿ ಇವರಿಗೆ ಸಹಕಾರ ನೀಡಬೇಕೆಂದು ಹೇಳಿದರಂತೆ ಎಂದು ತಿಳಿಸಿದರು.
ಯುದ್ಧದ ಸಂದರ್ಭದಲ್ಲಿ ಯಾವುದೇ ಮಹಿಳೆಯನ್ನು ದಾಸಿಯ ರೀತಿಯಲ್ಲಿ ನೋಡಬಾರದೆಂದು ಆಜ್ಞೆ ಮಾಡಿದ್ದರು. ಶಿವಾಜಿ ಅಧಿಕಾರಕ್ಕೆ ಬಂದಾಗ ಪಾರ್ಷಿಭಾಷೆಯನ್ನು ತೆಗೆದುಹಾಕಿ ಜನರಿಗೆ ಅರ್ಥವಾಗುವ ಭಾಷೆಯಲ್ಲಿ ಆಡಳಿತ ನಡೆಸಬೇಕೆಂದು ಸುಧಾರಣೆಗಳನ್ನು ಕೈಗೊಂಡರು. 1674 ರಲ್ಲಿ ಛತ್ರಪತಿ ಎಂದು ಕರೆಸಿಕೊಂಡರು ಶಿವಾಜಿಯು ಗೆರಿಲ್ಲಾ ಯುದ್ಧವನ್ನು ಪರಿಚಯಿಸಿದರು. ಅಂದರೆ ಬೆಟ್ಟ–ಗುಡ್ಡಗಳಲ್ಲಿ ಅಡಗಿ ಯುದ್ಧ ಮಾಡುವುದು ಎಂದರ್ಥ ಛತ್ರಪತಿ ಶಿವಾಜಿಯು ಸ್ವತಂತ್ರವಾಗಿ ಸಾಮ್ರಾಜ್ಯವನ್ನು ಕಟ್ಟಿ , ಜನರ ಪ್ರೀತಿ ವಿಶ್ವಾಸವನ್ನು ಗಳಿಸಿದಂತಹ ಮಹಾನ್ ವೀರ ಎಂದು ಹೇಳಿದರು

ಶ್ರೀರಂಗಪಟ್ಟಣದ ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದ ಟ್ರಸ್ಟ್ ನ ಗಜಾನನ ಸ್ವಾಮಿಯವರು ಮಾತನಾಡಿ ಶಿವಾಜಿಯ ಗುಣ ಇಂದು ಎಲ್ಲರಲ್ಲೂ ಇರಬೇಕೆಂದು ಹೇಳಿದರು ಶಿವಾಜಿಯ ಗುರು ದಾದಾಜಿ ಕೊಂಡದೇವ ರಾಮದಾಸರು ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಅಹಂಕಾರ ತುಂಬಿರುತ್ತದೆ. ಅಹಂಕಾರ ಒಳ್ಳೆಯದಲ್ಲ ಎಂದು ಹೇಳುತ್ತಿದ್ದರು. ತುಕರಾಮ್ ಮಹಾರಾಜ್ ಅವರು ತುಂಬಾ ಬಡತನದಿಂದ ಕೂಡಿರುತ್ತಾರೆ ಅಂದು ಛತ್ರಪತಿ ಶಿವಾಜಿಯವರು ಇದನ್ನು ಗಮನಿಸಿ ತಮ್ಮ ಸಾಮ್ರಾಜ್ಯದಿಂದ ಸಂಪತ್ತುಗಳನ್ನು ಅವರ ಮನೆಗೆ ಕಳಿಸಿಕೊಟ್ಟರೆಂದು ಹೇಳಿದರು
ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ವಿ.ಎನ್ ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಮ್ ಡಿ ಸುದರ್ಶನ್, ಮಾರುತಿ ಕೆ ನಾಗೇಂದ್ರ ರಾವ್, ಗಣೇಶ ರಾವ್ ಜ್ಞಾನಪ್ರಕಾಶ್ ಸುನೀಲ್ ಶ್ರೀನಿವಾಸ ಶಿಂಧೆ ಭೀಮರಾವ್ ಉಮಾಪತಿ ಸತ್ಯಪಾಲ್ ಮತ್ತಿತರರು ಉಪಸ್ಥಿತರಿದ್ದರು.

# ಕ್ಯಾನ್ಸರ್ ಕೇವಲ ಶ್ರೀಮಂತರ ಕಾಯಿಲೆಯಲ್ಲ

ಪ್ರತಿ ವರ್ಷ ಭಾರತದಲ್ಲಿ ಹಲವು ಕ್ಯಾನ್ಸರ್ ಜಾಗೃತಿ ದಿನಗಳನ್ನು ಅಭಿಯಾನಗಳು, ಸಾರ್ವಜನಿಕ ಕಾರ್ಯಕ್ರಮಗಳು ಮತ್ತು ಸಾಮಾಜಿಕ ಮಾಧ್ಯಮ ಚಟುವಟಿಕೆಗಳ ಮೂಲಕ ಆಚರಿಸಲಾಗುತ್ತದೆ. ಈ ಉಪಕ್ರಮಗಳು ಕ್ಯಾನ್ಸರ್ ಕುರಿತ ಅಳಲು–ಅಪಮಾನವನ್ನು ಕಡಿಮೆ ಮಾಡಲು, ಜನರು ಈ ವಿಷಯದ ಬಗ್ಗೆ ಮುಕ್ತವಾಗಿ ಮಾತನಾಡಲು ಮತ್ತು ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸಲು ಮಹತ್ವದ ಪಾತ್ರ ವಹಿಸಿವೆ. ಮುಖ್ಯವಾಗಿ, ಇತ್ತೀಚಿನ ವರ್ಷಗಳಲ್ಲಿ ಕ್ಯಾನ್ಸರ್ ಸೇರಿದಂತೆ ಸಾಂಕ್ರಾಮಿಕೇತರ ರೋಗಗಳನ್ನು ಎದುರಿಸಲು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಮೂಲಕ ಭಾರತವು ಗಮನಾರ್ಹ ಕ್ರಮಗಳನ್ನು ಕೈಗೊಂಡಿದೆ. ಆದರೆ ಈ ಪ್ರಯತ್ನಗಳ ನಡುವೆಯೂ ಒಂದು ಮಹತ್ವದ ಕೊರತೆ ಉಳಿದಿದೆ ಆರಂಭಿಕ ಪತ್ತೆ. ಭಾರತದಲ್ಲಿ ಹೆಚ್ಚಿನ ಕ್ಯಾನ್ಸರ್ ಪ್ರಕರಣಗಳು ಇನ್ನೂ ಮುಂದುವರಿದ ಹಂತಗಳಲ್ಲಿ ಪತ್ತೆಯಾಗುತ್ತಿದ್ದು, ಇದು ಕ್ಯಾನ್ಸರ್ ಸಂಬಂಧಿತ ಹೆಚ್ಚಿನ ಮರಣ ಪ್ರಮಾಣಕ್ಕೆ ಪ್ರಮುಖ ಕಾರಣವಾಗಿದೆ.

ಕ್ಯಾನ್ಸರ್ ನಗರ ಅಥವಾ ಶ್ರೀಮಂತ ಜನಸಮುದಾಯಗಳಿಗೆ ಮಾತ್ರ ಸೀಮಿತವಲ್ಲ; ವಿಶೇಷವಾಗಿ ಗ್ರಾಮೀಣ ಮತ್ತು ಅರ್ಧ ನಗರ ಪ್ರದೇಶಗಳಲ್ಲಿಯೂ ಇದು ವ್ಯಾಪಕವಾಗಿದೆ, ಅಲ್ಲಿ ವಿಶೇಷ ಚಿಕಿತ್ಸಾ ಸೌಲಭ್ಯಗಳ ಲಭ್ಯತೆ ಸೀಮಿತವಾಗಿದೆ. ರಾಷ್ಟ್ರೀಯ ಅಂದಾಜುಗಳ ಪ್ರಕಾರ, ಭಾರತದಲ್ಲಿ 60 ಶೇಕಡಕ್ಕೂ ಹೆಚ್ಚು ಕ್ಯಾನ್ಸರ್ ಪ್ರಕರಣಗಳು ಹಂತ ಙಙಙ ಅಥವಾ ಙಗಗಳಲ್ಲಿ ಪತ್ತೆಯಾಗುತ್ತವೆ. ಈ ಹಂತದಲ್ಲಿ ಚಿಕಿತ್ಸೆ ಹೆಚ್ಚು ಸಂಕೀರ್ಣ, ದುಬಾರಿ ಹಾಗೂ ಬಹುಸಾರಿ ಕಡಿಮೆ ಪರಿಣಾಮಕಾರಿಯಾಗುತ್ತದೆ. ಕೇವಲ ಜಾಗೃತಿ ಮಾತ್ರ ಸಮಯೋಚಿತ ನಿರ್ಣಯಕ್ಕೆ ಅಡ್ಡಿಯಾಗುವ ರಚನಾತ್ಮಕ ಅಡೆತಡೆಗಳನ್ನು ನಿವಾರಿಸಲು ಸಾಕಾಗುವುದಿಲ್ಲ.

ಭಾರತದಲ್ಲಿ ಪ್ರತಿವರ್ಷ 14 ಲಕ್ಷಕ್ಕೂ ಹೆಚ್ಚು ಹೊಸ ಕ್ಯಾನ್ಸರ್ ಪ್ರಕರಣಗಳು ದಾಖಲಾಗುತ್ತಿವೆ. ಇದರಲ್ಲಿ ಸ್ತನ, ಗರ್ಭಕಂಠ, ಬಾಯಿ ಹಾಗೂ ಕೊಲೊರೆಕ್ಟಲ್ ಕ್ಯಾನ್ಸರ್‌ಗಳು ಪ್ರಮುಖ ಪಾಲು ಹೊಂದಿವೆ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಇವು ಅತ್ಯಂತ ಮಹತ್ವದವು, ಏಕೆಂದರೆ ಇವುಗಳನ್ನು ತಪಾಸಣೆಯ ಮೂಲಕ ಆರಂಭಿಕ ಹಂತದಲ್ಲೇ ಪತ್ತೆ ಮಾಡಿ ಚಿಕಿತ್ಸೆ ನೀಡಬಹುದು. ಆದರೆ ಭಾರತದಲ್ಲಿ ತಪಾಸಣೆ ಹೆಚ್ಚಾಗಿ ಅವಕಾಶಾಧಾರಿತವಾಗಿದ್ದು, ಸಮರ್ಪಕವಾಗಿ ಜಾರಿಗೆ ಬಂದಿಲ್ಲ ಮತ್ತು ಬಹುಪಾಲು ವ್ಯಕ್ತಿಯ ಸ್ವಂತ ಪ್ರಯತ್ನ ಅಥವಾ ಖಾಸಗಿ ಚಿಕಿತ್ಸಾ ಸೌಲಭ್ಯಗಳ ಮೇಲೆ ಅವಲಂಬಿತವಾಗಿದೆ.

ತಡ ಹಂತದ ಕ್ಯಾನ್ಸರ್‌ನ ಭಾರವನ್ನು ಗ್ರಾಮೀಣ ಹಾಗೂ ಅರ್ಧ ನಗರ ಪ್ರದೇಶದ ಜನರು ಅತ್ಯಂತ ತೀವ್ರವಾಗಿ ಅನುಭವಿಸುತ್ತಾರೆ. ಮುಂದುವರಿದ ಕ್ಯಾನ್ಸರ್ ಚಿಕಿತ್ಸೆಗೆ ವಿಶೇಷ ನಿರ್ಣಯ ಪರೀಕ್ಷೆಗಳು, ಆಂಕಾಲಜಿ ಸೇವೆಗಳು, ಕಿರಣ ಚಿಕಿತ್ಸೆ ಹಾಗೂ ಕಿಮೋಥೆರಪಿ ಅಗತ್ಯವಿರುತ್ತದೆ. ಇಂತಹ ಸೌಲಭ್ಯಗಳು ಜಿಲ್ಲೆ ಅಥವಾ ಉಪಜಿಲ್ಲಾ ಮಟ್ಟದಲ್ಲಿ ಬಹುಸಾರಿ ಲಭ್ಯವಿಲ್ಲ. ಪರಿಣಾಮವಾಗಿ, ರೋಗಿಗಳು ದೂರದ ತೃತೀಯ ಮಟ್ಟದ ಆಸ್ಪತ್ರೆಗಳಿಗೆ ಪ್ರಯಾಣಿಸಬೇಕಾಗಿ ಬರುತ್ತದೆ. ಇದು ಚಿಕಿತ್ಸೆಯಲ್ಲಿ ವಿಳಂಬ, ಆರ್ಥಿಕ ಸಂಕಷ್ಟ ಮತ್ತು ನಗರ ಕ್ಯಾನ್ಸರ್ ಕೇಂದ್ರಗಳ ಮೇಲೆ ಹೆಚ್ಚುವರಿ ಒತ್ತಡವನ್ನುಂಟುಮಾಡುತ್ತದೆ. ಆರಂಭಿಕ ಪತ್ತೆಯನ್ನು ಬಲಪಡಿಸುವುದರಿಂದ ಕುಟುಂಬಗಳಿಗೂ ಹಾಗೂ ಆರೋಗ್ಯ ವ್ಯವಸ್ಥೆಯಿಗೂ ಉಂಟಾಗುವ ಈ ಭಾರವನ್ನು ಗಣನೀಯವಾಗಿ ಕಡಿಮೆ ಮಾಡಬಹುದು.

ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ಸಾಮಾನ್ಯ ಕ್ಯಾನ್ಸರ್‌ಗಳ ಜನಸಂಖ್ಯಾ ಮಟ್ಟದ ತಪಾಸಣೆ ಸೇರಿದಂತೆ ಕೆಲವು ಉಪಕ್ರಮಗಳ ಮೂಲಕ ಭಾರತವು ಈ ಸವಾಲನ್ನು ಎದುರಿಸಲು ಆರಂಭಿಸಿದೆ. ಇವು ಶ್ಲಾಘನೀಯ ಪ್ರಯತ್ನಗಳಾಗಿದ್ದರೂ, ಅವುಗಳ ವ್ಯಾಪ್ತಿ ಮತ್ತು ಸತತತೆ ಇನ್ನೂ ಸೀಮಿತವಾಗಿದೆ. ನಿಜವಾದ ಪರಿಣಾಮ ಬೀರುವುದಕ್ಕಾಗಿ, ಕ್ಯಾನ್ಸರ್ ತಪಾಸಣೆಯನ್ನು ರಾಷ್ಟ್ರೀಯ ಆದ್ಯತೆಯಾಗಿ ಬಲಪಡಿಸಿ, ಪ್ರಾಥಮಿಕ ಆರೋಗ್ಯ ಸೇವೆಗಳೊಂದಿಗೆ ಸಂಪೂರ್ಣವಾಗಿ ಏಕೀಕರಿಸಬೇಕು.

ಮುಂಚೂಣಿ ಆರೋಗ್ಯ ಕಾರ್ಯಕರ್ತರು ಈ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಇದರಲ್ಲಿ ಆಶಾ ಕಾರ್ಯಕರ್ತೆಯರು, ಸಹಾಯಕ ನರ್ಸ್ ಮಿಡ್‌ವೈಫ್‌ಗಳು (ANMs), ಬಹುಉದ್ದೇಶ ಆರೋಗ್ಯ ಕಾರ್ಯಕರ್ತರು, ಸಿಬ್ಬಂದಿ ನರ್ಸ್‌ಗಳು ಮತ್ತು ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಸೇರಿದ್ದಾರೆ. ಕೆಲ ಮುಂಚೂಣಿ ಕಾರ್ಯಕರ್ತರಿಗೆ ಈಗಾಗಲೇ ಕ್ಯಾನ್ಸರ್ ಜಾಗೃತಿ ಮತ್ತು ಮೂಲಭೂತ ತಪಾಸಣೆಯ ತರಬೇತಿ ನೀಡಲಾಗಿದೆ. ಆದರೆ ಇನ್ನೂ ಹೆಚ್ಚಿನ ವ್ಯಾಪ್ತಿ ಮತ್ತು ಸಂರಚಿತ ಸಾಮರ್ಥ್ಯ ವೃದ್ಧಿ ಅಗತ್ಯವಿದೆ. ಲಕ್ಷಣಗಳ ಆರಂಭಿಕ ಗುರುತು, ಸೂಕ್ತ ಸಲಹೆ ಮತ್ತು ಸಮಯೋಚಿತ ರೆಫರಲ್‌ಗಳು ಪ್ರಾಥಮಿಕ ಆರೈಕೆಯಲ್ಲಿಯೇ ರೂಢಿಯಾಗಬೇಕು.

ಅಮರ್ತ್ಯ ಸೇನ್ ಅವರ ಮಾತುಗಳಲ್ಲೇ ಹೇಳುವುದಾದರೆ, "ಆರೋಗ್ಯವು ಕೇವಲ ವೈದ್ಯಕೀಯ ಸೇವೆಯ ವಿಷಯವಲ್ಲ; ಅದು ಸಾಮಾಜಿಕ ನ್ಯಾಯದ ಪ್ರಶ್ನೆಯೂ ಹೌದು." ಭಾರತದಲ್ಲಿ ಕ್ಯಾನ್ಸರ್ ಫಲಿತಾಂಶಗಳು ಕೇವಲ ಜೈವಿಕ ರೋಗವನ್ನೇ ಅಲ್ಲ, ಬದಲಾಗಿ ಪ್ರವೇಶ, ಭೌಗೋಳಿಕತೆ ಮತ್ತು ಆರೋಗ್ಯ ಮೂಲಸೌಕರ್ಯದ ಅಸಮಾನತೆಗಳನ್ನೂ ಪ್ರತಿಬಿಂಬಿಸುತ್ತವೆ. ಈ ಅಸಮಾನತೆಗಳನ್ನು ನಿವಾರಿಸಲು ಜನರು ಮೊದಲ ಬಾರಿಗೆ ಆರೋಗ್ಯ ಸೇವೆಯೊಂದಿಗೆ ಸಂಪರ್ಕಿಸುವ ಹಂತದಲ್ಲಿಯೇ ವ್ಯವಸ್ಥೆಗಳನ್ನು ಬಲಪಡಿಸುವ ಅಗತ್ಯವಿದೆ.

ತಪಾಸಣಾ ಕಾರ್ಯಕ್ರಮಗಳ ವಿಸ್ತರಣೆಯ ವೆಚ್ಚ ಕುರಿತು ಸಾಮಾನ್ಯವಾಗಿ ಚಿಂತೆ ವ್ಯಕ್ತವಾಗುತ್ತದೆ. ಆದರೆ ಮುಂದುವರಿದ ಹಂತದ ಕ್ಯಾನ್ಸರ್ ಚಿಕಿತ್ಸೆಯ ಆರ್ಥಿಕ ಭಾರ ಕುಟುಂಬಗಳಿಗೂ ಹಾಗೂ ಸರ್ಕಾರಿ ಆಸ್ಪತ್ರೆಗಳಿಗೂ ಬಹಳ ಹೆಚ್ಚಿನದು. ಆರಂಭಿಕ ಪತ್ತೆಯಿಂದ ಚಿಕಿತ್ಸಾ ವೆಚ್ಚ ಕಡಿಮೆಯಾಗುತ್ತದೆ, ಜೀವಿತಾವಧಿ ಹೆಚ್ಚುತ್ತದೆ ಮತ್ತು ವ್ಯಕ್ತಿಗಳು ತಮ್ಮ ಕುಟುಂಬ ಹಾಗೂ ಸಮಾಜಕ್ಕೆ ಕೊಡುಗೆ ನೀಡುವುದನ್ನು ಮುಂದುವರಿಸಬಹುದು. ಈ ಅರ್ಥದಲ್ಲಿ, ತಪಾಸಣೆ ಕೇವಲ ಆರೋಗ್ಯ ಹಸ್ತಕ್ಷೇಪವಲ್ಲ; ಅದು ಸಾಮಾಜಿಕ ಮತ್ತು ಆರ್ಥಿಕವಾಗಿ ಸಮರ್ಥ ಹೂಡಿಕೆಯಾಗಿದೆ.
ತಂತ್ರಜ್ಞಾನವೂ ಈ ಪ್ರಯತ್ನಕ್ಕೆ ಬೆಂಬಲ ನೀಡಬಹುದು. ಚಲಿಸುವ ತಪಾಸಣಾ ಘಟಕಗಳು, ಟೆಲಿಮೆಡಿಸಿನ್, ಡಿಜಿಟಲ್ ಆರೋಗ್ಯ ದಾಖಲೆಗಳು ಮತ್ತು ಉದಯೋನ್ಮುಖ ಕೃತಕ ಬುದ್ಧಿಮತ್ತೆ ಆಧಾರಿತ ನಿರ್ಣಯ ಸಾಧನಗಳು ಗ್ರಾಮೀಣ ಮತ್ತು ನಗರ ಆರೋಗ್ಯ ಸೇವೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಅವಕಾಶವನ್ನು ಒದಗಿಸುತ್ತವೆ. ದೀರ್ಘಕಾಲೀನ ನೀತಿ ಬದ್ಧತೆಯೊಂದಿಗೆ ಬೆಂಬಲ ದೊರೆತರೆ, ಇಂತಹ ನವೀನತೆಗಳನ್ನು ದೊಡ್ಡ ಮಟ್ಟದಲ್ಲಿ ಜಾರಿಗೆ ತರುವ ಸಾಮರ್ಥ್ಯವನ್ನು ಭಾರತ ಈಗಾಗಲೇ ತೋರಿಸಿದೆ.

ರೋಗನಿರೋಧಕ ಲಸಿಕೆ ಅಭಿಯಾನಗಳಿಂದ ಹಿಡಿದು ಕ್ಷಯರೋಗ ನಿಯಂತ್ರಣದವರೆಗೆ, ಭಾರತವು ಹಿಂದೆ ದೊಡ್ಡ ಪ್ರಮಾಣದ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಕ್ಯಾನ್ಸರ್ ಆರೈಕೆಗೆ ಈಗಾಗಲೇ ಹೆಚ್ಚಿನ ಗಮನ ನೀಡಲಾಗುತ್ತಿದೆ; ಆದರೆ ಈ ಪ್ರಯತ್ನಗಳನ್ನು ಇನ್ನಷ್ಟು ಗಾಢಗೊಳಿಸಿ ವಿಸ್ತರಿಸುವ ಅಗತ್ಯವಿದೆ. ಜಾಗೃತಿ ಅಭಿಯಾನಗಳು ಉತ್ತಮ ಆರಂಭವಾಗಿದ್ದರೂ, ಆರಂಭಿಕ ಪತ್ತೆ ಸುಲಭ, ವ್ಯವಸ್ಥಿತ ಮತ್ತು ಸಮಾನವಾಗುವಾಗ ಮಾತ್ರ ನಿಜವಾದ ಬದಲಾವಣೆ ಸಾಧ್ಯ.

ಅಡಿಪಾಯವನ್ನು ಈಗಾಗಲೇ ಹಾಕಲಾಗಿದೆ ಮತ್ತು ಜಾಗೃತಿಯು ಸಂವಾದಕ್ಕೆ ದಾರಿ ಮಾಡಿಕೊಟ್ಟಿದೆ. ಈ ಪ್ರಗತಿಯನ್ನು ಮುಂದುವರೆಸಿ ರಾಷ್ಟ್ರೀಯ ಕ್ಯಾನ್ಸರ್ ತಪಾಸಣಾ ವ್ಯವಸ್ಥೆಯನ್ನು ಬಲಪಡಿಸುವುದೇ ಮುಂದಿನ ಅತ್ಯಾವಶ್ಯಕ ಹಂತ. ಸಂರಚಿತ ಮತ್ತು ರಾಷ್ಟ್ರವ್ಯಾಪಿ ಕಾರ್ಯಕ್ರಮವೊಂದೇ ಜಾಗೃತಿಯನ್ನು ಉತ್ತಮ ಫಲಿತಾಂಶಗಳಾಗಿ ಪರಿವರ್ತಿಸಬಲ್ಲದು □ ಮತ್ತು ಅದಕ್ಕಾಗಿ ಕ್ರಮ ಕೈಗೊಳ್ಳುವ ಸಮಯ ಈಗಲೇ.

ಡಾ. ಶೋಭನಾ ಶೇಖರ್
ಸೀನಿಯರ್ ಕನ್ಸಲ್ಟೆಂಟ್, ತಲೆ ಮತ್ತು ಕಂಠ ಶಸ್ತ್ರಚಿಕಿತ್ಸಾ ಆಂಕಾಲಜಿಸ್ಟ್ / ಬಾಯಿ ಕ್ಯಾನ್ಸರ್ ತಜ್ಞರು
ಟ್ರೈಲೈಫ್ ಆಸ್ಪತ್ರೆ

# ಫೆ.24ಕ್ಕೆ ಗುಲಬರ್ಗಾ ವಿ.ವಿ. 43ನೇ ಘಟಿಕೋತ್ಸವ: ಪಿ.ಜಿ.ಆರ್.ಸಿಂಧ್ಯಾ, ಮುರುಗೇಶ ನಿರಾಣಿ, ಕೇದಾರಲಿಂಗಯ್ಯ ಹಿರೇಮಠ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ: ಶಶಿಕಾಂತ್ ಎಸ್. ಉಡಿಕೇರಿ




**ಕಲಬುರಗಿ,ಫೆ.20:** ಗುಲಬರ್ಗಾ ವಿಶ್ವವಿದ್ಯಾಲಯದ 43ನೇ ವಾರ್ಷಿಕ ಘಟಿಕೋತ್ಸ ಕಾರ್ಯಕ್ರಮವು ಜ್ಞಾನಗಂಗಾ ಆವರಣದಲ್ಲಿರುವ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ಇದೇ ಫೆ.24 ರಂದು ಬೆಳಿಗ್ಗೆ 11 ಗಂಟೆಗೆ ಆಯೋಜಿಸಿದ್ದು, ಮೂವರು ಸಾಧಕರಿಗೆ ಈ ಬಾರಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ್ ಎಸ್. ಉಡಿಕೇರಿ ತಿಳಿಸಿದರು.

ಗುರುವಾರ ವಿಶ್ವವಿದ್ಯಾಲಯದ ಕೈಲಾಶ ಭವನ ಅತಿಥಿಗೃಹದಲ್ಲಿ ಕರೆಯಲಾದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿನ ಸಾಧನೆಗೆ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ಸಾಮಾಜಿಕ ಸೇವೆ ಪರಿಗಣಿಸಿ ಮಾಜಿ ಸಚಿವ ಮುರುಗೇಶ ನಿರಾಣಿ ಹಾಗೂ ಸಾಮಾಜಿಕ ಸೇವೆ ಗುರುತಿಸಿ ಹೋರಾಟಗಾರ ಕೇದಾರಲಿಂಗಯ್ಯ ಹಿರೇಮಠ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದರು.

ರಾಜ್ಯದ ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯಗಳ ಕುಲಾಧಿಪತಿಗಳಾದ ಥಾವರ್ ಚಂದ್ ಗೆಹ್ಲೋಟ್ ಅವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಗಣ್ಯರಿಗೆ ಗೌರವ ಡಾಕ್ಟರೇಟ್ ಮತು ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಹಾಗೂ ವಿಶ್ವವಿದ್ಯಾಲಯಗಳ ಸಮಕುಲಾಧಿಪತಿ ಡಾ. ಎಂ.ಸಿ. ಸುಧಾಕರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಪುಣೆಯ ಉನ್ನತ ರಕ್ಷಣಾ ತಂತ್ರಜ್ಞಾನ ಸಂಸ್ಥೆ (ಡೀಮ್ಡ್ ವಿಶ್ವವಿದ್ಯಾಲಯ)ಯ ವಿಶ್ರಾಂತ ಕುಲಪತಿ ಪ್ರೊ. ಎಲ್.ಎಂ. ಪಟ್ನಾಯಕ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದರು.

2023-24ನೇ ಸಾಲಿಗೆ ಸಂಬಂಧಿಸಿದ 43ನೇ ಘಟಿಕೋತ್ಸವ ಯಶಸ್ವಿಗೆ ಈಗಾಗಲೆ 16 ಉಪ ಸಮಿತಿಗಳನ್ನು ರಚಿಸಿದ್ದು, ಸಕಲ ಸಿದ್ಧತೆ ಪ್ರಕ್ರಿಯೆ ನಡೆದಿವೆ. 43ನೇ ಘಟಿಕೋತ್ಸವ ಈ ಹಿಂದೆಯೆ ಆಗಬೇಕಿತ್ತು. ಕಾರಣಾಂತರದಿಂದ ವಿಳಂಬವಾಗಿದ್ದು, ಇದು ಪೂರ್ಣಗೊಂಡ ನಂತರ ಶೀಘ್ರವೇ 2024-25ನೇ ಸಾಲಿಗೆ ಸಂಬಂಧಿಸಿದ 44ನೇ ಘಟಿಕೋತ್ಸವ ಸಹ ನಡೆಸಲಾಗುವುದು ಎಂದು ಸುದ್ದಿಗಾರರ ಪ್ರಶ್ನೆಗೆ ಕುಲಪತಿ ಪ್ರೊ. ಶಶಿಕಾಂತ ಎಸ್. ಉಡಿಕೇರಿ ಉತ್ತರಿಸಿದರು.

77 ವಿದ್ಯಾರ್ಥಿಗಳಿಗೆ 172 ಚಿನ್ನದ ಪದಕ:43ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಸ್ನಾತಕ ಪದವಿ ಕೋರ್ಸುಗಳಿಗೆ 24 ಹಾಗೂ ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ 148 ಸೇರಿ ಒಟ್ಟಾರೆ 172 ಚಿನ್ನದ ಪದಕಗಳನ್ನು 58 ಮಹಿಳಾ ವಿದ್ಯಾರ್ಥಿಗಳು ಹಾಗೂ 19 ಪುರುಷ ವಿದ್ಯಾರ್ಥಿಗಳು ಸೇರಿದಂತೆ 77 ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿದೆ. ಇನ್ನುಳಿದಂತೆ 9 ಚಿನ್ನದ ಪದಕಗಳನ್ನು ನಗದು ಬಹುಮಾನ ರೂಪದಲ್ಲಿ ಪರಿವರ್ತಿಸಿ 14 ಮಹಿಳಾ ವಿದ್ಯಾರ್ಥಿಗಳು ಮತ್ತು 5 ಪುರುಷ ವಿದ್ಯಾರ್ಥಿಗಳು ಸೇರಿ 19 ವಿದ್ಯಾರ್ಥಿಗಳಿಗೆ ನೀಡಲಾಗುವುದು.

ಚಿನ್ನದ ಪದಕ ವಿಜೇತರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಕನ್ನಡ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿನಿ ಕು. ಚನ್ನಮ್ಮ ಇವರು ಅತಿ ಹೆಚ್ಚು 11 ಚಿನ್ನದ ಪದಕಗಳಿಗೆ ಭಾಜನರಾಗಿದ್ದಾರೆ. ಪ್ರಾಣಿಶಾಸ್ತ್ರ ವಿಭಾಗದ ಕು. ರಾಹುಲ್ ಇವರು 9, ಎಂಬಿಎ ಅಧ್ಯಯನ ವಿಭಾಗದ ವಿದ್ಯಾರ್ಥಿನಿ ಕು. ಸುರೇಖಾ 8, ರಾಜ್ಯಶಾಸ್ತ್ರ ವಿಷಯದಲ್ಲಿ ಸೇಡಂನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಕು. ಶಮೀಮ ರಫತ್ 6, ಸಮಾಜ ಕಾರ್ಯ ಅಧ್ಯಯನ ವಿಭಾಗದ ವಿದ್ಯಾರ್ಥಿನಿ ಕು. ದೀಪಾ 6, ಗಣಕ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕು. ಸುಬೀಯಾ ನೂರೈನ್ 5, ರಸಾಯನಶಾಸ್ತ್ರ ವಿಭಾಗದ ವಿದ್ಯಾರ್ಥಿನಿ ಕು. ಪ್ರಿಯಾಂಕಾ ರಾಠೋಡ್ 5, ಜೀವ ರಸಾಯನಶಾಸ್ತ್ರ ವಿಭಾಗದ ವಿದ್ಯಾರ್ಥಿ ಕು. ಶಶಿಕುಮಾರ್ 5 ಹಾಗೂ ಕಲಬುರಗಿ ನಗರದ ಗುರುಕುಲ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕು. ಪ್ರೀತಿ ಜಿ. ಖೇಮ್ಕರ್ ಅವರು ಬಿಕಾಂ ಕೋರ್ಸಿನಲ್ಲಿ 5 ಚಿನ್ನದ ಪದಕ ಪಡೆಯಲಿದ್ದಾರೆ ಎಂದು ಕುಲಪತಿಗಳು 5 ಮತ್ತು 5ಕ್ಕಿಂತ ಹೆಚ್ಚು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ವಿವರ ನೀಡಿದರು.

123 ಅಭ್ಯರ್ಥಿಗಳಿಗೆ ಪಿ.ಎಚ್.ಡಿ. ಪದವಿ:43ನೇ ಘಟಿಕೋತ್ಸವದಲ್ಲಿ ವಿವಿಧ ನಿಕಾಯಗಳಲ್ಲಿ ಒಟ್ಟು 123 ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗುತ್ತಿದೆ. ಕಲಾ ನಿಕಾಯದಲ್ಲಿ 30, ಸಮಾಜ ವಿಜ್ಞಾನ ನಿಕಾಯದಲ್ಲಿ 26, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದಲ್ಲಿ 47, ವಾಣಿಜ್ಯ ಮತ್ತು ನಿರ್ವಹಣಾ ನಿಕಾಯದಲ್ಲಿ 9, ಶಿಕ್ಷಣ ನಿಕಾಯದಲ್ಲಿ 7 ಹಾಗೂ ಕಾನೂನು ನಿಕಾಯದಲ್ಲಿ 4 ವಿದ್ಯಾರ್ಥಿಗಳಿದ್ದಾರೆ. ಒಟ್ಟಾರೆಯಾಗಿ 62 ಪುರುಷ ಹಾಗೂ 61 ಮಹಿಳಾ ಸಂಶೋಧನಾ ವಿದ್ಯಾರ್ಥಿಗಳು ಪಿಎಚ್.ಡಿ ಪದವಿ ಪಡೆಯಲಿದ್ದಾರೆ.

19,133 ಅಭ್ಯರ್ಥಿಗಳಿಗೆ ಪದವಿ ಪ್ರದಾನ:ಪದವಿ ಕೋರ್ಸಿನಲ್ಲಿ 15,504, ಸ್ನಾತಕೋತ್ತರ ಕೋರ್ಸ್ನಲ್ಲಿ 3,462, ಪಿ.ಜಿ. ಡಿಪ್ಲೋಮಾ ಕೋರ್ಸಿನಲ್ಲಿ 44 ಹಾಗೂ ಪಿ.ಎಚ್.ಡಿ. ಪದವಿ 123 ಸೇರಿದಂತೆ ಒಟ್ಟಾರೆ 43ನೇ ವಾರ್ಷಿಕ ಘಟಿಕೋತ್ಸವದಲ್ಲಿ 19,133 ವಿದ್ಯಾರ್ಥಿಗಳು ವಿವಿಧ ಪದವಿಗಳನ್ನು ಪಡೆಯಲಿದ್ದಾರೆ. ಇದರಲ್ಲಿ 10,463 ಪುರುಷ ಹಾಗೂ 8,670 ಮಹಿಳಾ ವಿದ್ಯಾರ್ಥಿಗಳು ಸೇರಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕುಲಸಚಿವ ಪ್ರೊ. ರಮೇಶ್ ಲಂಡನಕರ್, ಮೌಲ್ಯಮಾಪನ ಕುಲಸಚಿವ ಡಾ. ಎನ್. ಜಿ. ಕಣ್ಣೂರು, ವಿತ್ತಾಧಿಕಾರಿ ಜಯಾಂಬಿಕ ಇದ್ದರು.

# ಶಿಸ್ತು, ಪರಿಶ್ರಮ, ಆತ್ಮವಿಶ್ವಾಸದಿಂದ ಉನ್ನತ ಸ್ಥಾನ



**ಚನ್ನಮ್ಮನ ಕಿತ್ತೂರು,ಫೆ.20:** ವಿದ್ಯಾರ್ಥಿಗಳು ಶಿಸ್ತು, ಪರಿಶ್ರಮ ಮತ್ತು ಆತ್ಮ ವಿಶ್ವಾಸಗಳಿಂದ ಬದುಕಿನಲ್ಲಿ ಉನ್ನತ ಸ್ಥಾನ ಹೊಂದಿ ಕಲಿತ ಶಾಲೆಗೆ ಹೆಸರು ತರಬೇಕೆಂದು ತಹಶೀಲ್ದಾರ ಕಲ್ಲನಗೌಡ ಪಾಟೀಲ ಹೇಳಿದರು.

ರಾಜಗುರು ಪ್ರಾಥಮಿಕ ಹಾಗೂ ಪ್ರೌಢಶಾಲೆ ಬಿ.ಎಸ್.ಎಂ. ಆಂಗ್ಲ ಮಾಧ್ಯಮಿಕ ಶಾಲೆಗಳ ವಾರ್ಷಿಕೋತ್ಸವದ ಅಧ್ಯಕ್ಷ ಸ್ಥಾನ ವಹಿಸಿ ಸತ್ಕಾರ ಸ್ವೀಕರಿಸಿ ಮಾತನಾಡಿದರು. ಪಠ್ಯ-ಸಹಪಠ್ಯ ಚಟುವಟಿಗಳಲ್ಲಿ ಭಾಗವಹಿಸಿ ತಮ್ಮ ಭವಿಷ್ಯ ರೂಪಿಸಿಕೊಳ್ಳಿ. ಎಂದರು.

ಕಸಾಪ ಅಧ್ಯಕ್ಷ ಎಸ್.ಬಿ.ದಳವಾಯಿ ಮಾತನಾಡಿ ಪಾಲಕರು ಮಕ್ಕಳ ಕಲಿಕಾ ಸಾಧನೆ ಪರೀಕ್ಷೇ ಮುಗಿಯುವವರೆಗೆ ಮೊಬೈಲ್ ಮತ್ತು ದೂರದರ್ಶನಗಳಿಂದ ದೂರವಿದ್ದು ಮಕ್ಕಳ ಉತ್ತಮ ಫಲಿತಾಂಶಕ್ಕಾಗಿ ಶಿಕ್ಷಕರ ಜೊತೆ ಸಹಕರಿಸಬೇಕೆಂದರು.

ಸಾನಿಧ್ಯ ವಹಿಸಿ ಕಲ್ಮಠದ ಮಡಿವಾಳ ರಾಜಯೋಗಿಂದ್ರ ಸ್ವಾಮಿಜಿ ಮಾತನಾಡಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರೇರೆಪಿಸಿದ ಪಾಲಕರಿಗೆ ಮತ್ತು ಶಿಕ್ಷಕರಿಗೆ ಶುಭ ಕೋರಿ ಶಾಲೆಯ ಸರ್ವತೋಮುಖ ವಿಕಾಸಕ್ಕಾಗಿ ವಿದ್ಯಾರ್ಥಿಗಳಿಗೆ ಅವಶ್ಯಕವಾ ಗಿರುವ ಶಿಕ್ಷಣ, ಸಂಸ್ಕೃತಿ ಮತ್ತು ಮೌಲ್ಯಗಳ ಕಡೆಗೆ ಗಮನ ಹರಿಸಬೇಕೆಂದರು.

ಶಿಕ್ಷಣ, ಕ್ರೀಡೆ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ದೈಹಿಕ ಶಿಕ್ಷಕ ಬಸವರಾಜ ವರಗನ್ನವರ-ಮಕ್ಕಳು ಕವಾಯತ್ ಮೂಲಕ ಅತಿಥಿಗಳನ್ನು ಬರಮಾಡಿಕೊಂಡರು.

ಅತಿಥಿಗಳು, ಪೂಜ್ಯರು, ಮಕ್ಕಳು ದೀಪ ಬಳಗಿಸುವುದರ ಮೂಲಕ ಮಕ್ಕಳ ಹಬ್ಬಕ್ಕೆ ಚಾಲನೆ ನೀಡಿದರು.. ಭಗವದ್ಗೀತೆಯ ಶ್ಲೋಕ, ವಚನ, ಪಠಣೆ ಮಾಡಿದರು. ನಿರ್ಮಲಾ ಪಾಟೀಲ ಸ್ವಾಗತಿಸಿದರು. ರಾಜೇಶ್ವರಿ ಕಳಸಣ್ಣವರ ಸಂಕ್ಷಿಪ್ತ ವರದಿ ವಾಚನ ಮಂಡಿಸಿದರು. ಸಾವಿತ್ರಿ ಗಾರಗಿ ವಂದಸಿದರು. ಶಿಕ್ಷಕಿಯರಾದ ಅನಸೂಯಾ ಪೂಜೇರಿ, ವೈಷ್ಣವಿ ಮತ್ತು ವಿದ್ಯಾರ್ಥಿ ಸಾನ್ವಿ ತೊರಗಲ್ಲಮಠ ನಿರೂಪಿಸಿದರು, ಈರಣ್ಣ ಗಡದಯ್ಯನವರಮಠ, ಶಿಕ್ಷಕ-ಶಿಕ್ಷಕಿಯರು, ಸಿಬ್ಬಂದಿ, ಪಾಲಕರು ಉಪಸ್ಥಿತರಿದ್ದರು.

# ಕನ್ನಡ ಭವನದಲ್ಲಿ 13ನೇ ಕಲಬುರಗಿ ಚಿತ್ರಸಂತೆ



**ಕಲಬುರಗಿ:ಫೆ.20:**ಚಿತ್ರಕಲಾಕೃತಿಗಳು ಜನಸಾಮಾನ್ಯರಿಗೆ ತಲಪುವಂತೆ ಮಾಡಬೇಕೆನ್ನುವ ದೆಸೆಯಲ್ಲಿ ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗ ದೊಂದಿಗೆ ಹಾಗೂ ವಿಕಾಸ ಅಕಾಡೆಮಿ, ಚೈತನ್ಯಮಯಿ ಟ್ರಸ್ಟ್, ದಿ ಆರ್ಟ ಇಂಟಿಗ್ರೇಶನ್ ಸೊಸೈಟಿ, ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ, ಬಿಸಿಲು ಆರ್ಟ್ ಗ್ಯಾಲರಿ, ರೋಟರಿ ಕ್ಲಬ್ ಆಫ್ ಗುಲಬರ್ಗಾ ನಾರ್ಥ್, ಸರ್ವಜ್ಞ ಮತ್ತು ಜಸ್ಟಿಸ್ ಶಿವರಾಜ ಪಾಟೀಲ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ ಇವುಗಳ ಸಹಕಾರದೊಂದಿಗೆ ಕಲ್ಯಾಣ ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರವಾದ ಕಲಬುರಗಿ ನಗರದ ಕನ್ನಡ ಭವನದಲ್ಲಿ 22-02-2026 ಭಾನುವಾರದಂದು ಒಂದು ದಿನದ 13ನೇ ಕಲಬುರಗಿ ಚಿತ್ರಸಂತೆಯನ್ನು ಆಯೋಜಿಸಲಾಗಿದೆ. ಹಿರಿಯ ಚಿತ್ರಕಲಾವಿದರು, ಯುವ ಚಿತ್ರಕಲಾವಿದರು ಮತ್ತು ಕಲಾವಿದ್ಯಾರ್ಥಿಗಳು ಸುಮಾರು 1500ಕ್ಕೂ ಹೆಚ್ಚು ವಿವಿಧ ಮಾಧ್ಯಮದ ಚಿತ್ರಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶದ ವಿವಿಧ ಮತ್ತು ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 125ಕ್ಕೂ ಹೆಚ್ಚು ಕಲಾವಿದರು ಕಲಾ ಮಳಿಗೆಯನ್ನು ಹಾಕಲಿದ್ದಾರೆ.

ಈ ಕಲಬುರಗಿ ಚಿತ್ರಸಂತೆಯಲ್ಲಿ ಪ್ರದರ್ಶನಗೊಳ್ಳಲಿರುವ ನಿಸರ್ಗಚಿತ್ರ, ಅಮೂರ್ತಚಿತ್ರ, ನೈಜಶೈಲಿಯ ಚಿತ್ರಗಳು, ಗ್ರಾಫಿಕ್ ಮಾಧ್ಯಮದ ಕಲಾಕೃತಿಗಳು, ಸಂಪ್ರದಾಯ ಶೈಲಿಯ ಚಿತ್ರಗಳು, ಕೋಲಾಜ್ ಮಾಧ್ಯಮದ ಚಿತ್ರಗಳು ಮತ್ತು ಶಿಲ್ಪಕಲಾಕೃತಿಗಳು ಹೀಗೆ ದೃಶ್ಯಕಲೆಯ ವಿವಿಧ ಪ್ರಕಾರದ ಕಲಾಕೃತಿಗಳನ್ನು ನಗರದ ವಾಣಿಜ್ಯೋದ್ಯಮಿಗಳು, ವೈದ್ಯರು, ಇಂಜಿನೀಯರಗಳು, ವಾಸ್ತುಶಿಲ್ಪಿಗಳು ಮತ್ತು ಹೋಟೆಲ್ ಉದ್ಯಮಿಗಳಲ್ಲದೇ ಜನಸಾಮಾನ್ಯರು ಕೂಡಾ ಅತ್ಯಂತ ಕಡಿಮೆ ಬೆಲೆಗಳಲ್ಲಿ ತಮಗೆ ಇಷ್ಟವಾದ ಚಿತ್ರಕಲಾಕೃತಿಗಳನ್ನು ಖರೀದಿಸಿ ತಮ್ಮ ಮನೆಯ ಗೋಡೆಯ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

ಈ ಕಲಬುರಗಿ ಚಿತ್ರಸಂತೆಯಲ್ಲಿ ನೂರು ರೂಪಾಯಿಗಳಿಂದ ಹಿಡಿದು ಒಂದು ಲಕ್ಷ ರೂಪಾಯಿಗಳವರೆಗಿನ ಬೆಲೆಯ ಕಲಾಕೃತಿಗಳು ಇರುತ್ತವೆ. ಜೊತೆಗೆ ಚಿತ್ರಸಂತೆ ನಡೆಯುವ ಸ್ಥಳದಲ್ಲಿ ಭಾವಚಿತ್ರ ರಚಿಸುವ ಚಿತ್ರಕಲಾವಿದರು ಇರುವುದರಿಂದ ನಿಮ್ಮದೇ ಭಾವಚಿತ್ರವನ್ನು ರಚಿಸಿಕೊಂಡು ಸಂತೋಷ ಪಡಬಹುದು ಒಟ್ಟಾರೆ ಸಾವಿರಾರು ಕಲಾವಿದರು ಕಲಾಸಕ್ತರು ಮತ್ತು ಕಲಾಪೋಷಕರ 'ನ್ನು ಒಂದೆಡೆ ಸೇರಿಸುವ ಈ ಚಿತ್ರಸಂತೆ ಒಂದು ದಿನದ ಮಟ್ಟಿಗೆ ನಗರದ ಕನ್ನಡ ಭವನದಲ್ಲಿ ಹಬ್ಬದ ವಾತಾವರಣವನ್ನು ಸೃಷ್ಟಿಸಿ ಸಾರ್ವಜನಿಕರಲ್ಲಿ ಕಲಾಭಿಮಾನ ಬೆಳಸಲಿದೆ.

ಸಾಮಾನ್ಯವಾಗಿ ದೊಡ್ಡ ದೊಡ್ಡ ಮೇಟ್ರೊ ನಗರಗಳಲ್ಲಿ ನಡೆಯುವ ಕಲಾಮೇಳಗಳು, ಪ್ರತಿಷ್ಠಿತ ಕಲಾಗ್ಯಾಲರಿಗಳಲ್ಲಿ ನಡೆಯುವ ಪ್ರದರ್ಶನಗಳು ತುಂಬಾ ಕಮರ್ಷಿಯಲ್ ಆಗಿರುತ್ತವೆ. ಅಲ್ಲಿ ಜನಸಾಮಾನ್ಯರು ಚಿತ್ರಕಲಾಕೃತಿಗಳನ್ನು ಖರೀದಿಸಲು ಮತ್ತು ಕಲಾಕೃತಿಗಳನ್ನು ವೀಕ್ಷಿಸಲು ಸಾಧ್ಯವಾಗುವದಿಲ್ಲ ಆದರೆ ಕಲಬುರಗಿಯಲ್ಲಿ ನಡೆಯುತ್ತಿರುವ ಈ ಚಿತ್ರಸಂತೆಗೆ ಅದ್ಯಾವುದರ ಸೋಂಕಿರಲ್ಲ. ಕೇವಲ ಶ್ರೀಮಂತರು ಮತ್ತು ವಾಣಿಜ್ಯ ಕಲಾಗ್ಯಾಲರಿಗಳವರು ಮಾತ್ರ ಉತ್ತಮವಾದ ಚಿತ್ರಕಲಾಕೃತಿಗಳನ್ನು ಖರೀದಿಸಬಹುದು ಎಂಬ ಅಪವಾದವನ್ನು ಸುಳ್ಳು ಮಾಡಿ ಶ್ರೀಸಾಮಾನ್ಯನಿಗೂ ಕೈಗೆಟುಕುವ ದರಗಳಲ್ಲಿ ದೊರೆಯಲ್ಲಿ ಎಂಬುದೇ ಈ ಕಲಬುರಗಿ ಚಿತ್ರಸಂತೆಯು ಮುಖ್ಯ ಉದ್ದೇಶವಾಗಿದೆ.

ಈ ಹಿಂದಿನ ಚಿತ್ರಸಂತೆಗಳಲ್ಲಿ ಸಿಕ್ಕಿರುವ ಅಭೂತಪೂರ್ವ ಪ್ರತಿಕ್ರಿಯೆಯ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರೇರಣೆ ಹಾಗೂ ಪ್ರೋತ್ಸಾಹ ಪಡೆದು, 13ನೇ ಕಲಬುರಗಿ ಚಿತ್ರಸಂತೆಯನ್ನು ಇನ್ನೂ ಉತ್ತಮ ರೀತಿಯಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಇದೇ ಸಂದರ್ಭದಲ್ಲಿ ಮಕ್ಕಳಲ್ಲಿ ದೃಶ್ಯಕಲಾ ಪ್ರಜ್ಞೆಯನ್ನು ಬೆಳೆಸಲು ಚಿಕ್ಕಮಕ್ಕಳ ಚಿತ್ರಕಲಾ ಸ್ಪರ್ಧೆ ಮತ್ತು ಕುಂಭ ಕಲೆಯ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಸುಮಾರು 500 ಕ್ಕೂ ಹೆಚ್ಚು ಶಾಲಾ ಮಕ್ಕಳು ಭಾಗವಹಿಸುವ ನಿರೀಕ್ಷೆ ಇದೆ.

ಈ ಕಲಬುರಗಿ ಚಿತ್ರಸಂತೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಾದ ಫೌಜಿಯಾ ತರನ್ನುಮ್ ಬಿ. ಅವರು ಉದ್ಘಾಟಿಸಲಿದ್ದು, ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಕಲಬುರಗಿ ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀಮತಿ ವರ್ಷಾ ರಾಜೀವ ಜಾನೆ ಅವರು ಉದ್ಘಾಟಿಸಲಿದ್ದಾರೆ, ಮಾಜಿ ಸಂಸದರಾದ ಶ್ರೀ ಬಸವರಾಜ ಪಾಟೀಲ ಸೇಡಂ ಅವರು ಗೌರವ ಉಪಸ್ಥಿತಿ ವಹಿಸಲಿದ್ದು ಮುಖ್ಯ ಅತಿಥಿಗಳಾಗಿ ಕಲಬುರಗಿ ಗ್ರಾಮೀಣ ಮತಕ್ಷೇತ್ರದ ಶಾಸಕರಾದ ಶ್ರೀ ಬಸವರಾಜ ಮತ್ತಿಮಡು, ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶರಣಬಸಪ್ಪ ಪಪ್ಪಾ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬಸವರಾಜ ಎಲ್ ಜಾನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರಾದ ಶ್ರೀಮತಿ ಜಗದೀಶ್ವರಿ ಅ ನಾಶಿ, ರೋಟರಿ ಕ್ಲಬ್ ಆಫ್ ಗುಲಬರ್ಗಾ ನಾರ್ಥನ ಅಧ್ಯಕ್ಷರಾದ ಶ್ರೀ ಆನಂದ ದಂಡೋತಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ವಿಜಯಕುಮಾರ ಪಾಟೀಲ್ ತೇಗಲತಿಪ್ಪಿ ಮತ್ತು ವಾಣಿಜ್ಯೋದ್ದಿಮಿ ಶ್ರೀ ರಾಧೆಶ್ಯಾಮ ಠಾಕೂರ ಅವರು ಭಾಗವಹಿಸಲಿದ್ದಾರೆ. ಚೈತನ್ಯಮಯಿ ಟ್ರಸ್ಟನ ನಿರ್ದೇಶಕ ಮತ್ತು ಹಿರಿಯ ಚಿತ್ರಕಲಾವಿದರಾದ ಡಾ. ಎ.ಎಸ್. ಪಾಟೀಲ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

**ಸಾಂಸ್ಕೃತಿಕ ಕಾರ್ಯಕ್ರಮಗಳು, ಕಾರ್ಯಾಗಾರ ಮತ್ತು ಪ್ರಾತ್ಯಕ್ಷತೆಗಳು:**

ಪುಷ್ಪಹಸ್ತ ನೃತ್ಯ ಕಲಾ ಕೇಂದ್ರದ ಕಲಾವಿದರಿಂದ ಭರತನಾಟ್ಯ ಪ್ರದರ್ಶನ, ಶ್ರೀ ಸಂಗಯ್ಯ ಹಳ್ಳದಮಠ ಮತ್ತು ತಂಡದವರಿಂದ ರಂಗಗೀತೆ, ತತ್ವಪದಗಳು ಮತ್ತು ಪರಿಸರ ಗೀತೆಗಳ ಪ್ರಸ್ತುತಿ ಹಾಗೂ ಅಂತರಂಗ ಸಾಂಸ್ಕೃತಿಕ ಕಲಾ ಸಂಘದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಶಿಲ್ಪಕಲಾವಿದ ದಾನಯ್ಯ ಚೌಕಿಮಠ ಅವರಿಂದ ಕುಂಭಕಲೆ ಪ್ರಾತ್ಯಕ್ಷತೆ ಮತ್ತು ಕಾರ್ಯಾಗಾರ, ಶಿಲ್ಪಕಲಾವಿದ ಗೋಪಾಲ ಕೆ.ಪಿ. ಅವರಿಂದ ಭಾವಶಿಲ್ಪ ಪ್ರಾತ್ಯಕ್ಷತೆ, ಚಿತ್ರಕಲಾವಿದ ಗಿರೀಶ ಬಿ ಕುಲಕರ್ಣಿ ಅವರು ಸೃಜನಶೀಲ ವರ್ಣಚಿತ್ರ ಪ್ರಾತ್ಯಕ್ಷತೆ ನಡೆಸಿಕೊಡಲಿದ್ದಾರೆ.

ಡಾ. ಎ.ಎಸ್. ಪಾಟೀಲ ವಿ.ಬಿ. ಬಿರಾದಾರ ಎಂ.ಎಚ್. ಬೆಳಮಗಿ ಡಾ. ಪರಶುರಾಮ ಪಿ. ಸಂಯೋಜಕರು 13ನೇ ಕಲಬುರಗಿ ಚಿತ್ರಸಂತೆ ತಿಳಿಸಿದ್ದಾರೆ.

# ಸಂಸದ ಶಶಿ ತರೂರ್ ಅವರ ಹೊಸ ಪುಸ್ತಕ ಬಿಡುಗಡೆ ಮಾಡಿದ ಉಪರಾಷ್ಟ್ರಪತಿ

**ನವದೆಹಲಿ, ಫೆ. 19** – ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಹಿರಿಯ ಕಾಂಗ್ರೆಸ್ ನಾಯಕ ಮತ್ತು ಸಂಸದ ಶಶಿ ತರೂರ್ ಅವರ ಹೊಸ ಪುಸ್ತಕ ದಿ ಸೇಜ್ ಹೂ ರೀ ಇಮ್ಯಾಜಿನ್ಡ್ ಹಿಂದೂಯಿಸಂ: ದಿ ಲೈಫ್, ಲೆಸನ್ಸ್ , ಅಂಡ್ ಲೆಗಸಿ ಆಫ್ ಶ್ರೀ ನಾರಾಯಣ ಗುರು ಅನ್ನು ಔಪಚಾರಿಕವಾಗಿ ಬಿಡುಗಡೆ ಮಾಡಿದರು.



ಇದನ್ನು ಸುಧಾರಕ ನಾರಾಯಣ ಗುರು ಅವರ ಆಧ್ಯಾತ್ಮಿಕ ಮತ್ತು ಸಾಮಾಜಿಕ ಪರಂಪರೆಯನ್ನು ಸಂರಕ್ಷಿಸುವ ಒಂದು ಹೆಗ್ಗುರುತು ಕೃತಿ ಎಂದು ಶ್ಲಾಘಿಸಿದರು. ಅಲೆಫ್ ಬುಕ್ ಕಂಪನಿ ಪ್ರಕಟಿಸಿದ ಜೀವನಚರಿತ್ರೆಯು, ಜಾತಿ ತಾರತಮ್ಯದ ವಿರುದ್ಧ ಹೋರಾಡಿದ 19 ನೇ ಶತಮಾನದ ಕೇರಳ ಮೂಲದ ಸಾಮಾಜಿಕ ಸುಧಾರಕ ಮತ್ತು ಆಧ್ಯಾತ್ಮಿಕ ನಾಯಕನ ಜೀವನವನ್ನು ಪರಿಶೋಧಿಸುತ್ತದೆ.

ಇಲ್ಲಿನ ಇಂಡಿಯಾ ಇಂಟರ್ನ್ಯಾಷನಲ್ ಸೆಂಟರ್ (ಐಐಸಿ) ನಲ್ಲಿ ತುಂಬಿದ ಸಭಾಂಗಣವನ್ನುದ್ದೇಶಿಸಿ ಮಾತನಾಡಿದ ರಾಧಾಕೃಷ್ಣನ್, ಜಾತಿ ತಾರತಮ್ಯವನ್ನು ಎದುರಿಸಲು ಮತ್ತು ಸಾಮಾಜಿಕ ಸಮಾನತೆಯನ್ನು ಉತ್ತೇಜಿಸಲು ನಾರಾಯಣ ಗುರು ಅವರ ಪ್ರಯತ್ನಗಳನ್ನು ಎತ್ತಿ ತೋರಿಸಿದರು.

ಒಂದು ಜಾತಿ, ಒಂದು ಧರ್ಮ, ಮಾನವಕುಲಕ್ಕೆ ಒಂದು ದೇವರು ಎಂಬ ಅವರ ಅಮರ ಸಂದೇಶವು ಘನತೆ, ಸಮಾನತೆ ಮತ್ತು ಸಾರ್ವತ್ರಿಕ ಸಹೋದರತ್ವಕ್ಕಾಗಿ ಕ್ರಾಂತಿಕಾರಿ ಕರೆಯಾಗಿ ಉಳಿದಿದೆ ಎಂದು ಅವರು ಹೇಳಿದರು, ಎಲ್ಲರಿಗೂ ಮುಕ್ತವಾಗಿರುವ ದೇವಾಲಯದ ಪವಿತ್ರಿಕರಣ ಮತ್ತು ಶಿಕ್ಷಣದ ಪ್ರಚಾರ ಸೇರಿದಂತೆ ನಾರಾಯಣ ಗುರು ಅವರ ಉಪಕ್ರಮಗಳು ಬುದ್ಧಿವಂತಿಕೆ ಮತ್ತು ಸಹಾನುಭೂತಿಯಿಂದ ಸಮಾಜವನ್ನು ಪರಿವರ್ತಿಸಲು ಸಹಾಯ ಮಾಡಿದೆ ಎಂದು ಹೇಳಿದರು.

ಗುರುಗಳ ಜೀವನ ಮತ್ತು ಬೋಧನೆಗಳನ್ನು ದಾಖಲಿಸಿದ್ದಕ್ಕಾಗಿ ತರೂರ್ ಅವರ ಕಾರ್ಯವನ್ನು ಉಪರಾಷ್ಟ್ರಪತಿಗಳು ಶ್ಲಾಘಿಸಿದರು. ಪುಸ್ತಕಗಳು ಸತ್ಯವನ್ನು ಕಾಪಾಡುತ್ತವೆ. ಪರಂಪರೆಯನ್ನು ವಿರೂಪದಿಂದ ರಕ್ಷಿಸುತ್ತವೆ. ಅವು ವಿದ್ವಾಂಸರನ್ನು ಆಳವಾಗಿ ಸಂಶೋಧನೆ ಮಾಡಲು, ಯುವಕರನ್ನು ವಿಮರ್ಶಾತ್ಮಕವಾಗಿ ಯೋಚಿಸಲು ಮತ್ತು ಸಮಾಜವನ್ನು ಜವಾಬ್ದಾರಿಯುತವಾಗಿ ವರ್ತಿಸಲು ಪ್ರೇರೇಪಿಸುತ್ತವೆ.

ನಮ್ಮ ಆಧ್ಯಾತ್ಮಿಕ ಮತ್ತು ಸಾಮಾಜಿಕ ಕಾರ್ಯಕ್ಷಮತೆಯನ್ನು ಆಳ ಮತ್ತು ಪಾಂಡಿತ್ಯದಿಂದ ದಾಖಲಿಸದಿದ್ದರೆ, ನಮ್ಮ ನಾಗರಿಕತೆಯ ಸ್ಮರಣೆಯ ಪ್ರಮುಖ ಭಾಗವನ್ನು ಕಳೆದುಕೊಳ್ಳುವ ಅಪಾಯವಿದೆ ಎಂದು ರಾಧಾಕೃಷ್ಣನ್ ಹೇಳಿದರು, ಇದು ತಲೆಮಾರುಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ ಎಂಬ ಪುಸ್ತಕವನ್ನು ಬರೆದಿದ್ದಕ್ಕಾಗಿ ತರೂರ್ ಅವರನ್ನು ಶ್ಲಾಘಿಸಿದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE